# ಜೀವನ ಕೌಶಲ್ಯ

**50 – 56**


| | | |
|---|---|---|
| ಪಾಠ 50 | : | ಸಮುದಾಯದಲ್ಲಿ ಸೇವೆಯ ಅಗತ್ಯವನ್ನು ಗುರುತಿಸುವುದು |
| ಪಾಠ 51 | : | ಸಮುದಾಯದ ಅಗತ್ಯತೆಗಳು ಮತ್ತು ಆಕಾಂಕ್ಷೆಗಳಿಗೆ ಆದ್ಯತೆ ನೀಡಿರಿ |
| ಪಾಠ 52 | : | ಸಮುದಾಯ ಸ್ವಾಮ್ಯದ ಯೋಜನೆಯನ್ನು ವಿನ್ಯಾಸಗೊಳಿಸುವಿಕೆ |
| ಪಾಠ 53 | : | ಸಮುದಾಯ ಸೇವಾ ಯೋಜನೆಯನ್ನು ವಿನ್ಯಾಸಗೊಳಿಸುವಿಕೆ |
| ಪಾಠ 54 | : | ಪ್ರಕೃತಿಯೊಂದಿಗೆ ಜೀವನ |
| ಪಾಠ 55 | : | ಸ್ವಯಂ ಸೇವಕರು ಏಕೆ? |
| ಪಾಠ 56 | : | ಕಾನೂನು ಸಾಕ್ಷರತೆ |



**CAPUCHIN KRISHIK SEVA KENDRA®**
Vimukti, Koyyur Cross
Laila Post-574 214
Belthangady Taluk, D.K District,
Karnataka, India

Email: capchildfund@yahoo.com
Website:www.capuchinksk.org

ಪಾಠ 50

# ಸಮುದಾಯದಲ್ಲಿ ಸೇವೆಯ ಅಗತ್ಯವನ್ನು ಗುರುತಿಸುವಿಕೆ



## ಪಾಠದ ಉದ್ದೇಶಗಳು

- ಹದಿಹರೆಯದವರಿಗೆ ಮತ್ತು ಯುವಕರಿಗೆ, ವೀಕ್ಷಣೆ ಮತ್ತು ವಿಮರ್ಶಾತ್ಮಕ ಚಿಂತನೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು,
- ಹದಿಹರೆಯದವರಿಗೆ ಮತ್ತು ಯುವಕರಿಗೆ ಸಮುದಾಯದಲ್ಲಿ ಇರುವ ಸಮಸ್ಯೆಗಳನ್ನು ಗುರುತಿಸಲು ಸಹಾಯ ಮಾಡುವುದು ಮತ್ತು
- ಶಿಕ್ಷಣಾರ್ಥಿಯರನ್ನು ಸಂವೇದನಾಶೀಲರಾಗಿರಲು ಮತ್ತು ಸಾಮಾಜಿಕ ಸಮಸ್ಯೆಗಳೊಂದಿಗೆ ವ್ಯವಹರಿಸಲು ಕೆಲಸ ಮಾಡಲು ಪ್ರೇರೇಪಿಸುವುದು.

**ಅವಧಿ: 90 ನಿಮಿಷಗಳು**

## ಸಮಯ ವಿಂಗಡಣೆ

| 30 ನಿಮಿಷಗಳು | 60 ನಿಮಿಷಗಳು |
|---|---|
| ಚಟುವಟಿಕೆ 1 ಮತ್ತು ಚರ್ಚೆ | ಚಟುವಟಿಕೆ 2 ಮತ್ತು ಚರ್ಚೆ |

## ತರಬೇತಿಗೆ ಬೇಕಾದ ಸಾಮಗ್ರಿಗಳು

ಕಪ್ಪು ಹಲಗೆ, ಸೀಮೆಸುಣ್ಣ, ಕಾಗದದ ಹಾಳೆಗಳು, ಬಣ್ಣಗಳು, ಲಭ್ಯವಿರುವ ಸ್ಥಳೀಯ ವಸ್ತುಗಳು

## ಪರಿಕಲ್ಪನ ಟಿಪ್ಪಣಿ



ನಮ್ಮಲ್ಲಿ ಪ್ರತಿಯೊಬ್ಬರಿಗೂ ಸಮುದಾಯ ಎಂಬ ಪದದ ವಿಭಿನ್ನ ವ್ಯಾಖ್ಯಾನ ಮತ್ತು ಅನುಭವವಿದೆ. ಸಮುದಾಯವು ನಮ್ಮ ಜಾತಿಗೆ ಸೇರಿದ ಮತ್ತು ಹತ್ತಿರದಲ್ಲಿ ವಾಸಿಸುವ ಜನರ ಗುಂಪನ್ನು ಮಾತ್ರ ಒಳಗೊಂಡಿರುವುದಿಲ್ಲ. ವಾಸ್ತವವಾಗಿ, ಒಂದು ಸಮುದಾಯವು ಅವರ ಜಾತಿ, ಧರ್ಮ, ಸಾಮಾಜಿಕ–ಆರ್ಥಿಕ ಸಮಾಜವನ್ನು ಲೆಕ್ಕಿಸದೆ ಸಮಾಜದ ಎಲ್ಲ ಸದಸ್ಯರನ್ನು ಒಳಗೊಂಡಿರುತ್ತದೆ. ಸಮುದಾಯವು ಎಲ್ಲಾ ಸದಸ್ಯರು ವಿಭಿನ್ನವಾಗಿರ ಬಹುದಾದ ಒಂದು ಗುಂಪು, ಆದರೆ ಪರಸ್ಪರ ಅವಲಂಬಿತವಾಗಿರುತ್ತದೆ. ಆದ್ದರಿಂದ, ನಾವು ಸಮುದಾಯದೊಂದಿಗೆ ವಿವಿಧ ಹಂತಗಳಲ್ಲಿ ಬಾಂಧವ್ಯ ಹೊಂದಿದ್ದೇವೆ. ಕೆಲವು ಹದಿಹರೆಯದವರು ತಮ್ಮ ಸಮುದಾಯವನ್ನು ತಮ್ಮ ಬೆಳವಣಿಗೆಗೆ ತಡೆಗೋಡೆಯಾಗಿ ನೋಡುತ್ತಾರೆ ಆದರೆ ಕೆಲವರು ಸಮುದಾಯವನ್ನು ಬೆಂಬಲ ವ್ಯವಸ್ಥೆಯಾಗಿ ನೋಡುತ್ತಾರೆ. ಸಮುದಾಯದ ಅಭಿವೃದ್ಧಿಗೆ ಏನಾದರೂ ಮಾಡಬೇಕೆಂಬ ಹಂಬಲವೇ ಬದಲಾವಣೆ ತರಲು ಆಧಾರವಾಗಿದೆ.

ಈ ಪಾಠವು ಹದಿಹರೆಯದವರು ಮತ್ತು ಯುವಕರು ಸಮುದಾಯಕ್ಕಾಗಿ ಪರಿಣಾಮಕಾರಿ ಕ್ರಮವನ್ನು ಕೈಗೊಳ್ಳಲು ಸಹಾಯ ಮಾಡುವ ಸರಣಿಯ ಮೊದಲ ಪಾಠವಾಗಿದೆ. ಆದ್ದರಿಂದ, ಆಯೋಜಕರು ಸದಸ್ಯರನ್ನು ಪ್ರೇರೇಪಿಸುವುದು ಮತ್ತು ಉಳಿದ ಪಾಠಗಳಿಗೆ ತ್ವರಿತತೆಯನ್ನು ನಿಗದಿಸುವುದು ಕಡ್ಡಾಯವಾಗಿದೆ. ಶಿಕ್ಷಣಾರ್ಥಿಯರು ತುಂಬಾ ಎತ್ತರದ ಗುರಿಯನ್ನು ಹೊಂದಿದ್ದಾರೆ ಎಂದು ಹೇಳುವ ಮೂಲಕ ಅವರನ್ನು ನಿರುತ್ಸಾಹಗೊಳಿಸಬೇಡಿ, ಬದಲಿಗೆ ಆಯೋಜಕರು ಅವರ ಗುರಿಯನ್ನು ಚಿಕ್ಕ ಸಮಯದ ಗುರಿಗಳಲ್ಲಿ ವಿಭಜಿಸಲು ಸಹಾಯ ಮಾಡಿರಿ ಮತ್ತು ಅವರ ಗುರಿಗಳನ್ನು ಸಾಧಿಸುವಂತೆ ಮಾಡುವ ಪ್ರಕ್ರಿಯೆಯಲ್ಲಿ ಅವರಿಗೆ ಮಾರ್ಗದರ್ಶನ ಮಾಡಿರಿ.

## ಚಟುವಟಿಕೆ 1



## ಉದ್ದೇಶ

- ಹದಿಹರೆಯದವರು ಮತ್ತು ಯುವಕರಲ್ಲಿ ಸೃಜನಶೀಲ ಚಿಂತನೆಯನ್ನು ಅಭಿವೃದ್ಧಿಪಡಿಸುವುದು,
- ಹದಿಹರೆಯದವರು ಮತ್ತು ಯುವಕರು ಅವರ ಸಮುದಾಯದ ಅಭಿವೃದ್ಧಿಗೆ ಕೆಲಸ ಮಾಡಲು ಪ್ರೇರೇಪಿಸುವುದು ಮತ್ತು
- ಯುವಕರ ಸಂವಹನ ಕೌಶಲ್ಯವನ್ನು ಹೆಚ್ಚಿಸುವುದು.

## METHOD ವಿಧಾನ

ಆಯೋಜಕರು ಶಿಕ್ಷಣಾರ್ಥಿಯರನ್ನು ಸಣ್ಣ ಗುಂಪುಗಳಾಗಿ ವಿಂಗಡಿಸಿರಿ. ಪ್ರತಿ ಗುಂಪಿಗೆ ಹಳೆಯ ಪತ್ರಿಕೆಗಳು, ಜೋಡಿ ಕತ್ತರಿ, ಗಮ್ ಮತ್ತು ಬಣ್ಣಗಳನ್ನು ನೀಡಿರಿ. ಗುಂಪು ಅವರ ಸುತ್ತಮುತ್ತಲಿನ ಯಾವುದೇ ಇತರ ವಸ್ತುಗಳನ್ನು ಬಳಸಲು ಅನುಮತಿಸಲಾಗಿದೆ. ಗುಂಪು ಅವರ ಕನಸಿನ ಗ್ರಾಮ ಅಥವಾ ಸಮುದಾಯವನ್ನು ಹೇಗೆ ನೋಡಲು ಬಯಸುವರು ಹಾಗೂ ಯಾವುದೇ ಸಮಸ್ಯೆಗಳಿಲ್ಲದ ಸಮುದಾಯವನ್ನು ಕಲ್ಪಿಸಿಕೊಳ್ಳಲು ಹೇಳಿರಿ. ಪ್ರತಿ ಗುಂಪಿಗೆ ಅವರ ಯೋಜನೆಯಲ್ಲಿ ಕೆಲಸ ಮಾಡಲು 20 ನಿಮಿಷಗಳನ್ನು ನೀಡಲಾಗುವುದು ಹಾಗೂ ನೀಡಿದ ವಸ್ತುಗಳನ್ನು ಬಳಸಿಕೊಂಡು ಅವರ ಗ್ರಾಮದ ಮಾದರಿಯನ್ನು ಅಭಿವೃದ್ಧಿಪಡಿಸಬೇಕು. ಅವರು ಕಾಲ್ಪನಿಕ (ವಾಸ್ತವಿಕವಾಗಿರಬೇಕು) ವಿಷಯಗಳನ್ನು ಸೇರಿಸಲು ಸಾಧ್ಯವಿಲ್ಲ.




20 ನಿಮಿಷಗಳ ನಂತರ, ಪ್ರತಿ ಶಿಕ್ಷಣಾರ್ಥಿ ಗುಂಪಿಗೆ ಅವರ ಮಾದರಿ ಸಮುದಾಯವನ್ನು ಹಂಚಿಕೊಳ್ಳಲು ಕೇಳಿರಿ ಮತ್ತು ಅವರ ಸಮುದಾಯವು ಹಳ್ಳಿಯಲ್ಲಿ ಹೇಗೆ ಕಾಣುತ್ತದೆ ಎಂಬುದರ ಕುರಿತು 4 ನಿಮಿಷಗಳ ಭಾಷಣವನ್ನು ಮಾಡಲು ಹೇಳಿರಿ. ಪ್ರತಿ ಗುಂಪು ಅವರ ಅಭಿಪ್ರಾಯಗಳನ್ನು ಹಂಚಿಕೊಂಡ ನಂತರ, ಆಯೋಜಕರು ಗುಂಪುಗಳನ್ನು ಕನಸಿನ ಸಮುದಾಯದ ಬಗ್ಗೆ ಅವರ ಅಭಿಪ್ರಾಯಗಳೊಂದಿಗೆ ಬರಲು ಪ್ರೋತ್ಸಾಹಿಸುವುದು ಮತ್ತು ಆಯೋಜಕರು ಅವರ ಅಭಿಪ್ರಾಯಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ. ಆಯೋಜಕರು ಅವರ ಕನಸಿನ ಸಮುದಾಯಕ್ಕೆ ಅವರ ದೃಷ್ಟಿಕೋನ ಮತ್ತು ಅದರ ಕಡೆಗೆ ಅವರು ಹೇಗೆ ಕೆಲಸ ಮಾಡಬಹುದು ಎಂಬುದರ ಕುರಿತು ಚರ್ಚಿಸಿರಿ.

ಆಯೋಜಕರು ನಂತರ ಶಿಕ್ಷಣಾರ್ಥಿಯ ಸಮುದಾಯದಲ್ಲಿ ಬದಲಾಯಿಸಬೇಕಾದ ವಿಷಯಗಳನ್ನು ಗುರುತಿಸಲು ಗುಂಪನ್ನು ಕೇಳಿರಿ. ಇದರಿಂದಾಗಿ ಅವರ ಸಮುದಾಯ ಮತ್ತು ಗ್ರಾಮವು ಅವರ ಮಾದರಿಗಳಲ್ಲಿ ಮತ್ತು ಹಲಗೆಯ ಮೇಲೆ ಬರೆದ ಕನಸಿನ ಹಳ್ಳಿ ಮತ್ತು ಸಮುದಾಯದಂತೆ ಆಗಬಹುದು.

ಆಯೋಜಕರು ನೀಡಿದ ಚಾರ್ಟ್ ಅನ್ನು ಹಲಗೆಯ ಮೇಲೆ ಬರೆಯುವುದು ಮತ್ತು ಈ ಅಂಕಣಗಳಲ್ಲಿ ತಮ್ಮ ಪ್ರತಿಕ್ರಿಯೆಗಳನ್ನು ಬರೆಯಿರಿ.

| ನನ್ನ ಕನಸಿನ ಗ್ರಾಮ ಮತ್ತು ಸಮುದಾಯ | ಗ್ರಾಮದಲ್ಲಿ ಪ್ರಸ್ತುತ ಸ್ಥಿತಿ | ಕೈಗೊಳ್ಳಬೇಕಾದ ಕ್ರಮ |
|---|---|---|
| ವಿದ್ಯುತ್ 24*7 | | |
| ಎಲ್ಲರಿಗೂ ಸರಿಯಾದ ಶಿಕ್ಷಣ ಸಿಗುತ್ತಿದೆಯೇ | | |

## ಚರ್ಚಿಸಬೇಕಾದ ಅಂಶಗಳು

- ಆಯೋಜಕರು ಶಿಕ್ಷಣಾರ್ಥಿಯರ ಕನಸಿನ ಸಮುದಾಯ ಮತ್ತು ಕನಸಿನ ಹಳ್ಳಿಯ ಬಗ್ಗೆ, ಅವರ ದೃಷ್ಟಿಯನ್ನು ವಿಸ್ತರಿಸಲು ಗುಂಪನ್ನು ಪ್ರೋತ್ಸಾಹಿಸಿರಿ. ಅವರಿಗೆ ಕಾಲ್ಪನಿಕ ವಿಷಯಗಳನ್ನು ತಪ್ಪಿಸಿ, ಹಾಗೂ ವಾಸ್ತವಿಕ ವಿಷಯಗಳ ಕನಸು ಕಾಣುವಂತೆ ಕೇಳಿಕೊಳ್ಳಿರಿ.

- ವಸ್ತುವನ್ನು ಸಾಧ್ಯವಾದಷ್ಟು ಸೃಜನಾತ್ಮಕವಾಗಿ ಬಳಸಲು, ಚೌಕದಿಂದ ಹೊರಗೆ ಯೋಚಿಸಲು ಮತ್ತು ಅವರ ಮೊದಲ ಆಲೋಚನೆಗಳನ್ನು ಮೀರಿ ಹೋಗಲು ಗುಂಪಿಗೆ ಹೇಳಿರಿ. ಪ್ರತಿಯೊಬ್ಬರ ವಿಚಾರಗಳನ್ನು ಅವರ ಮಾದರಿಯಲ್ಲಿ ಅಳವಡಿಸಿಕೊಂಡು ಎಲ್ಲರಿಗೂ ಅವರ ವಿಚಾರಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಆಯೋಜಕರು ಅವಕಾಶ ಕಲ್ಪಿಸಿರಿ.

- ಅವರ ಸಮುದಾಯದಲ್ಲಿ ಬದಲಾಗಬೇಕಾದ ವಿಷಯಗಳ ಬಗ್ಗೆ ಯೋಚಿಸಲು ಶಿಕ್ಷಣಾರ್ಥಿ ಗುಂಪನ್ನು ಪ್ರೋತ್ಸಾಹಿಸಿರಿ, ಯೋಚಿಸದೆ ದೃಷ್ಟಿಕೋನವನ್ನು ಅಭಿವೃದ್ಧಿಪಡಿಸಲು ಅವರು ಅದನ್ನು ಹೇಗೆ ಸಾಧಿಸುವರು ಎಂಬುದರ ಕುರಿತು ಚರ್ಚಿಸಿರಿ. ಅವರು ತಮ್ಮ ಕನಸಿನ ಹಳ್ಳಿಗಾಗಿ ಸಾಮೂಹಿಕವಾಗಿ ಹೇಗೆ ಕೆಲಸ ಮಾಡಬಹುದು ಎಂಬುದನ್ನು ಚರ್ಚಿಸಲು ಸಹ ಆಯೋಜಕರು ಕೇಳಿರಿ.

- ಆಯೋಜಕರು ಶಿಕ್ಷಣಾರ್ಥಿಯರ ನಡುವೆ ಬುದ್ಧಿಮಂಥನ ತರಗತಿ ಮಾಡಲು ಪ್ರೋತ್ಸಾಹಿಸಿರಿ. ಪ್ರತಿಯೊಂದಕ್ಕೂ ಅವರ ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶವಿರುವ ಬುದ್ಧಿಮಂಥನ ತರಗತಿಯಲ್ಲಿ ಹೇಗೆ ನೆಡೆಯಬೇಕು ಎಂಬುದರ ಕುರಿತು ಶಿಕ್ಷಣಾರ್ಥಿಯರಿಗೆ ಸಂಕ್ಷಿಪ್ತವಾಗಿ ತಿಳಿಸಿರಿ ಮತ್ತು ಅಭಿಪ್ರಾಯಗಳಿಗೆ ಸರಿ ಅಥವಾ ತಪ್ಪು ಎಂಬುದರ ಕುರಿತು ಯಾರೂ ಟೀಕೆ ಮಾಡುಬಾರದು. ಅವುಗಳನ್ನು ಕೇವಲ ಬರೆಯಲಾಗಿದೆ ಹಾಗೂ ಪ್ರತಿಯೊಬ್ಬರೂ ಅವರ ಅಭಿಪ್ರಾಯಗಳನ್ನು ಹಂಚಿಕೊಂಡ ನಂತರ, ಗುಂಪು ಪ್ರತಿಯೊಂದು ಅಂಶಗಳ ಮೂಲಕ ಅದನ್ನು ಸ್ವೀಕರಿಸಬೇಕೇ ಅಥವಾ ಬೇಡವೇ ಎಂದು ಚರ್ಚಿಸಿರಿ.

- ಶಿಕ್ಷಣಾರ್ಥಿ ಗುಂಪುಗಳು ಅವರ ಯೋಜನೆಗಳಲ್ಲಿ ಕೆಲಸ ಮಾಡಲು ಪ್ರೇರೇಪಿಸಲು, ಗುಂಪುಗಳು ಮಾಡಿದ ಮಾದರಿಗಳನ್ನು ಸಣ್ಣ ಬರಹಗಳ ಜೊತೆಗೆ ಪ್ರದರ್ಶಿಸಲಿ.

## ಚಟುವಟಿಕೆ 2



### ಉದ್ದೇಶ

- ಶಿಕ್ಷಣಾರ್ಥಿಯರಲ್ಲಿ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.
- ಹದಿಹರೆಯದವರು ಮತ್ತು ಯುವಕರು ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಜನರು ಹಂಚಿಕೊಂಡ ಅಭಿಪ್ರಾಯಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು.

METHOD

### ವಿಧಾನ

ಆಯೋಜಕರು ಶಿಕ್ಷಣಾರ್ಥಿಯರನ್ನು ಇಬ್ಬಿಬ್ಬರ ಜೋಡಿಯಾಗಿ ವಿಂಗಡಿಸಿ. ಪ್ರತಿಯೊಬ್ಬ ಶಿಕ್ಷಣಾರ್ಥಿಯರು ಅವರ ಹಳ್ಳಿಗಳ ಅಭಿವೃದ್ಧಿಗಾಗಿ ಕೆಲಸ ಮಾಡಬೇಕಾದ ಸರ್ಕಾರಿ ಅಧಿಕಾರಿಗಳು ಎಂದು ಕಲ್ಪಿಸಿಕೊಳ್ಳಬೇಕೆಂದು ತಿಳಿಸಿರಿ. ಪ್ರತಿಯೊಂದು ಜೋಡಿಯು ಗ್ರಾಮದ ಒಂದು ಭಾಗಕ್ಕೆ ಹೋಗಿ ಸಮುದಾಯ ಮತ್ತು ಗ್ರಾಮವು ಎದುರಿಸುತ್ತಿರುವ ಸವಾಲುಗಳನ್ನು ಕಂಡುಹಿಡಿಯಲು ಹೇಳಿರಿ. ಅವರು ಕಂಡ ವೀಕ್ಷಣೆಗಳನ್ನು ಬರೆಯಬಹುದು ಅಥವಾ ಅವರ ಪ್ರದೇಶದ ಜನರೊಂದಿಗೆ ಚರ್ಚೆಗಳನ್ನು ಮಾಡಬಹುದು. ಅವರು ಸಮುದಾಯದ ಸವಾಲುಗಳನ್ನು ಮಾತನಾಡಲು ಮತ್ತು ಹಂಚಿಕೊಳ್ಳಲು ಸಮುದಾಯದ ಇತರರನ್ನು ಪ್ರೋತ್ಸಾಹಿಸಿರಿ ಮತ್ತು ಆದರೆ ಅವರ ವೈಯಕ್ತಿಕ ಅಥವಾ ಕುಟುಂಬದ ಸವಾಲುಗಳಲ್ಲ. ಒಂದು ಗಂಟೆಯಲ್ಲಿ ಶಿಕ್ಷಣಾರ್ಥಿಯ ಗುಂಪು ತರಗತಿಗೆ ಹಿಂತಿರುಗಬೇಕು.

ಪ್ರತಿ ಜೋಡಿಯು ಹಿಂತಿರುಗಿದ ನಂತರ ಇಡೀ ಗುಂಪಿನೊಂದಿಗೆ ಅವರ ಅವಲೋಕನಗಳನ್ನು ಚರ್ಚಿಸಿರಿ. ಮಾಹಿತಿಯನ್ನು ಒಟ್ಟುಗೂಡಿಸಿ ಕಪ್ಪು ಹಲಗೆಯಲ್ಲಿ ಪ್ರಸ್ತುತಪಡಿಸಿರಿ.

### ಪ್ರಶ್ನೆಗಳು

- ಸಮುದಾಯದ ಜನರೊಂದಿಗೆ ಚರ್ಚೆಯ ಅನುಭವ ಹೇಗಿತ್ತು?
- ಜನರು ಹೇಗೆ ತಮ್ಮನ್ನು ಪರಿಚಯಿಸಿಕೊಂಡರು ಮತ್ತು ಚರ್ಚೆಗೆ ಸಹಕರಿಸಿದರು?
- ಸಮುದಾಯದಲ್ಲಿ ನೀವು ಗಮನಿಸಿದ ಸವಾಲುಗಳನ್ನು ಪಟ್ಟಿ ಮಾಡಿ.
- ನಿಮ್ಮ ಅವಲೋಕನಗಳು ಮತ್ತು ಸಮುದಾಯದೊಂದಿಗೆ ನೀವು ನಡೆಸಿದ ಚರ್ಚೆಗಳ ನಡುವೆ ಯಾವುದೇ ವ್ಯತ್ಯಾಸವನ್ನು ನೀವು ಕಂಡುಕೊಂಡಿರಾ?
- ಈ ಚಟುವಟಿಕೆಯು ಉಪಯುಕ್ತವಾಗಿದೆಯೇ? ಈ ಅನುಭವದಿಂದ ನೀವು ಏನು ಕಲಿತಿರಿ?

### ಕಲಿಕೆಯನ್ನು ಮುಂದಕ್ಕೆ ಸಾಗಿಸಿ

**ಆಯೋಜಕರು ಸಮುದಾಯದಲ್ಲಿ ತಿಳಿಸಬೇಕಾದ ಸಮಸ್ಯೆಗಳನ್ನು ಸಂಕ್ಷಿಪ್ತಗೊಳಿಸಿರಿ.**

### ಶಿಕ್ಷಣಾರ್ಥಿಯರಿಗೆ ಕಾರ್ಯ

ಶಿಕ್ಷಣಾರ್ಥಿಯರಿಗೆ ಅವರು ಭಾವೋದ್ರಿಕ್ತವಾಗಿ ಭಾವಿಸುವ ಒಂದು ಸಾಮಾಜಿಕ ಸಮಸ್ಯೆಯ ಬಗ್ಗೆ ಯೋಚಿಸಲು ಹೇಳಿರಿ. ಆ ಸಮಸ್ಯೆಯ ಕುರಿತು ಅವರು ಹೇಗೆ ಕೆಲಸ ಮಾಡಲು ಬಯಸುವರು ಎಂಬುದನ್ನು ಬರೆಯಲು ಹೇಳಿರಿ.






ರುಕ್ಮಿಣಿಯು ಸುಗಾಲಿ ಎಂದು ಕರೆಯಲ್ಪಡುವ ಬುಡಕಟ್ಟು ಸಮುದಾಯದಿಂದ ಬಂದವಳು, ಇದು ಆಂಧ್ರಪ್ರದೇಶದಲ್ಲಿ ವಾಸಿಸುವ ಅತ್ಯಂತ ಪ್ರಾಚೀನ ಬುಡಕಟ್ಟು ಜನಸಂಖ್ಯೆಯಾಗಿದೆ. ಈಕೆ ಕುಟುಂಬದ ಹಿರಿಯ ಮಗಳು, ಅವರ ಜೀವನೋಪಾಯಕ್ಕಾಗಿ ಕೂಲಿ ಕೆಲಸ ಮತ್ತು ಹಂಚಿಕೆ ಬೆಳೆಯನ್ನು ಅವಲಂಬಿಸಿರುವರು. ಆಕೆಗೆ ಒಬ್ಬ ಅಣ್ಣ ಇದ್ದಾನೆ, ಅವನು ಕೂಲಿ ಕೆಲಸ ಮಾಡುತ್ತಿದ್ದಾನೆ ಮತ್ತು ರುಕ್ಮಿಣಿ ಕುಟುಂಬದ ಪುರುಷ ಪ್ರಾಬಲ್ಯವನ್ನು ಬದಲಿಸುವ ಮತ್ತು ಆಕೆಯ ಸ್ವಂತ ವಿಧಾನದ ಮೂಲಕ ಕುಟುಂಬವನ್ನು ಬೆಂಬಲಿಸುವ ಸವಾಲನ್ನು ತೆಗೆದುಕೊಳ್ಳುವವರೆಗೂ, ಅವಳ ಅಣ್ಣನೆ ಆದಾಯದ ಮೂಲವಾಗಿರವನು.

ಪ್ರಾಯೋಜಕರ ಸಹಾಯದಿಂದ, ಆಕೆಯ ಪೋಷಕರ ಬೆಂಬಲದೊಂದಿಗೆ; ರುಕ್ಮಿಣಿ ತನ್ನ ಪದವಿಯನ್ನು ಪೂರ್ಣಗೊಳಿಸಲು ಸಾಧ್ಯವಾಯಿತು. ಆಕೆಯನ್ನು ಆಂಧ್ರ ಪ್ರದೇಶ ರಾಜ್ಯ ರಸ್ತೆ ಮತ್ತು ಸಾರಿಗೆ ಸಂಸ್ಥೆ (APSRTC) ಬಸ್ ಕಂಡಕ್ಟರ್ ಆಗಿ ಆಯ್ಕೆ ಮಾಡಿದೆ, ಅಲ್ಲಿ ಅವಳು ಪ್ರಸ್ತುತ ಕೆಲಸ ಮಾಡುತ್ತಿದ್ದಾಳೆ. ಅವಳು ತನ್ನ ಕುಟುಂಬವನ್ನು ಸಲುಹುತ್ತಿದ್ದಾಳೆ. ಅವಳು ಸ್ವಲ್ಪ ಹಣವನ್ನು ಉಳಿಸಲು ಸಮರ್ಥರಾಗಿದ್ದಾರೆ ಮತ್ತು ಪಂಚಾಯತ್ ವ್ಯಾಪ್ತಿಯ ಮಹಿಳಾ ಮೈಕ್ರೋ ಫೆಡರೇಶನ್‌ನ ಸಕ್ರಿಯ ಸದಸ್ಯರಾಗಿದ್ದಾರೆ. ಅವಳು ತನ್ನ ಹಳ್ಳಿಯ ಅಭಿವೃದ್ಧಿಗಾಗಿ ಕೆಲಸ ಮಾಡಲು ಬಯಸುವಳು ಹಾಗೂ ತನ್ನ ಹಳ್ಳಿಯಲ್ಲಿರುವ ಇತರರಿಗೆ ತಾನು ಎದುರಿಸಿದ ಸವಾಲುಗಳಿಂದ ಸುಲಭವಾಗಿ ಹೊರಬರುವಂತೆ ಸಹಾಯ ಮಾಡಲು ಬಯಸುವಳು.

### ಚರ್ಚಾ ಪ್ರಶ್ನೆಗಳು

**ಸೇವೆಯ ಅಗತ್ಯತೆಗೆ ಕೆಲಸ ಮಾಡಲು ನಿಮಗೆ ಸಹಾಯ ಮಾಡುವ ಸಾಮರ್ಥ್ಯಗಳು ಯಾವುವು?**

**ಅವಳು ಹೇಗೆ ಪ್ರಾರಂಭಿಸಿದಳು ಹಾಗೂ ಎದುರಿಸಿದ ಸವಾಲುಗಳ ಬಗ್ಗೆ ನೀವು ನನಗೆ ಹೇಳಬಲ್ಲಿರಾ?**



**ಸಮಾಜಕ್ಕಾಗಿ ದುಡಿದ ಯಾವುದೇ ವ್ಯಕ್ತಿಯನ್ನು ನೀವು ಎಂದಾದರೂ ಭೇಟಿ ಮಾಡಿದ್ದೀರಾ?**

**ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಲು ನೀವು ಅಭಿವೃದ್ಧಿಪಡಿಸಬೇಕಾದ ಕ್ಷೇತ್ರಗಳ ಬಗ್ಗೆ ಯೋಚಿಸಿದ್ದೀರಾ?**

ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ.)

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).

ಪಾಠ 51

# ಸಮುದಾಯದ ಅಗತ್ಯತೆಗಳು ಮತ್ತು ಆಕಾಂಕ್ಷೆಗಳಿಗೆ ಆದ್ಯತೆ ನೀಡಿರಿ



## ಪಾಠದ ಉದ್ದೇಶಗಳು

- ಸಮುದಾಯದಲ್ಲಿರುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸವುದು,
- ಕೆಲಸ ಮಾಡಬೇಕಾದ ಸಮಸ್ಯೆಗಳಿಗೆ ಆದ್ಯತೆ ನೀಡಿ ಸಾಧ್ಯವಾಗಿಸುವುದು, ಮತ್ತು
- ಹದಿಹರೆಯದವರಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಸಂಘಟನೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

## ಅವಧಿ: 60 ನಿಮಿಷಗಳು

### ಸಮಯ ವಿಂಗಡಣೆ

| 10 ನಿಮಿಷಗಳ | 15 ನಿಮಿಷಗಳು | 25 ನಿಮಿಷಗಳು | 10 ನಿಮಿಷಗಳು |
|---|---|---|---|
| ಚಟುವಟಿಕೆ 1 | ಚಟುವಟಿಕೆ 1 ಕುರಿತು ಚರ್ಚೆ | ಚಟುವಟಿಕೆ 2 | ಚಟುವಟಿಕೆ 2 ಕುರಿತು ಚರ್ಚೆ |

## ತರಬೇತಿಗೆ ಬೇಕಾದ ಸಾಮಗ್ರಿಗಳು

ಕಪ್ಪು ಹಲಗೆ, ಸೀಮೆಸುಣ್ಣ, A4 ಕಾಗದದ ಹಾಳೆಗಳು ಮತ್ತು ಬಣ್ಣದ ಪೆನ್ಸಿಲ್‌ಗಳು/ಸ್ಕೆಚ್ ಪೆನ್ನುಗಳು, ಚಾರ್ಟ್ ಪೇಪರ್, ಚಿತ್ರ ಕಾರ್ಡ್‌ಗಳು.

### ಪರಿಕಲ್ಪನಾ ಟಿಪ್ಪಣಿ:

ಕೊನೆಯ ಪಾಠದಲ್ಲಿ ನಾವೆಲ್ಲರೂ ನಮ್ಮ ಸಮುದಾಯ ಹಾಗೂ ಗ್ರಾಮಕ್ಕಾಗಿ ನಾವು ಹೊಂದಿರುವ ವಿವಿಧ ಅಗತ್ಯಗಳು ಹಾಗೂ ಆಕಾಂಕ್ಷೆಗಳನ್ನು ಚರ್ಚಿಸಿದ್ದೇವೆ. ವಿವಿಧ ಚಟುವಟಿಕೆಗಳ ಮೂಲಕ ನಾವು ನಮ್ಮ ಹಳ್ಳಿಯಲ್ಲಿ ಎದುರಿಸಬೇಕಾದ ಸವಾಲುಗಳನ್ನು ಗುರುತಿಸಿದ್ದೇವೆ, ನಾವು ನಮ್ಮ ಹಳ್ಳಿಯನ್ನು ಬೆಳೆಸಲು, ಅಭಿವೃದ್ಧಿಪಡಿಸಲು ಮತ್ತು ಮಾದರಿ ಗ್ರಾಮವಾಗಿಸಲು ಬಯಸಿದ್ದೇವೆ.

ಶಿಕ್ಷಣಾರ್ಥಿಯರಿಗೆ ಆದ್ಯತೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಲು ಆಯೋಜಕರು ಈ ಕೆಳಗಿನ ಚಟುವಟಿಕೆಯನ್ನು ಮಾಡಿಸಿರಿ.

## ಚಟುವಟಿಕೆ 1 ಐಸ್ ಬ್ರೇಕರ್



### ಉದ್ದೇಶಗಳು

- ಹದಿಹರೆಯದವರು ಮತ್ತು ಯುವಕರು ಆದ್ಯತೆಯ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು ಮತ್ತು
- ಶಿಕ್ಷಣಾರ್ಥಿಯರಲ್ಲಿ ಸಂಘಟನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

## ವಿಧಾನ



ಶಿಕ್ಷಣಾರ್ಥಿಯರಿಗೆ ಚಿತ್ರಗಳ ರೂಪದಲ್ಲಿ ಅವರ ದೈನಂದಿನ ದಿನಚರಿಯನ್ನು ತೋರಿಸುವ ಚಿತ್ರ ಕಾರ್ಡ್ಗಳನ್ನು ನೀಡಿರಿ. ಶಿಕ್ಷಣಾರ್ಥಿಯರನ್ನು ಗುಂಪುಗಳಾಗಿ ವಿಂಗಡಿಸಿರಿ. ಪ್ರತಿ ಗುಂಪಿನ ಸದಸ್ಯರು ಕಾರ್ಡ್‌ಗಳನ್ನು ಹೆಚ್ಚು ಸೂಕ್ತವೆಂದು ಭಾವಿಸುವ ಕ್ರಮದಲ್ಲಿ ಜೋಡಿಸಲು ಹೇಳಿರಿ. ಗುಂಪಿನ ಸದಸ್ಯರು ಸಾಮಾನ್ಯವಾಗಿ ಕಾರ್ಡ್‌ಗಳನ್ನು ಅವರುಗಳು ಅನುಸರಿಸುವ ಅಥವಾ ಅನುಸರಿಸಬೇಕಿನಿಸುವ ದೈನಂದಿನ ದಿನಚರಿಯ ಕ್ರಮದಲ್ಲಿ ಜೋಡಿಸುವರು. ಅವರು ಚಿತ್ರಗಳನ್ನು ಹೀಗೆಕೆ ಅನುಸರಿಸಿ ಜೋಡಿಸಿದರು ಮತ್ತು ಈ ರೀತಿ ಅನುಸರಿಸುವ ಪ್ರಾಮುಖ್ಯತೆ ಏನು ಎಂಬುದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಆಯೋಜಕರು ಕೇಳಿರಿ. ಶಿಕ್ಷಣಾರ್ಥಿಯರಿಗೆ ಜೀವನದಲ್ಲಿ ಆದ್ಯತೆಯ ಪ್ರಾಮುಖ್ಯತೆಯನ್ನು ಕಂಡುಹಿಡಿಯಲು ಮುಕ್ತ ಚರ್ಚೆಯನ್ನು ನಡೆಸಿರಿ.

## ಚರ್ಚಿಸಬೇಕಾದ ಅಂಶಗಳು:

### ಆಯೋಜಕರು

- ನಮ್ಮ ಜೀವನದಲ್ಲಿ ಎಲ್ಲವನ್ನೂ ಅದರ ಪ್ರಾಮುಖ್ಯತೆ, ಅಗತ್ಯ ಮತ್ತು ಸಮಯಕ್ಕೆ ಅನುಗುಣವಾಗಿ ಹೇಗೆ ಆಯೋಜಿಸಲಾಗಿದೆ ಎಂಬುದನ್ನು ಚರ್ಚಿಸಿರಿ. ಉದಾಹರಣೆಗೆ, ನಾವು ನಮ್ಮ ದಿನವನ್ನು ಮುಂಜಾನೆ ಪ್ರಾರಂಭಿಸಬೇಕು ಹಾಗೂ ದಿನಚರಿಯನ್ನು ಅನುಸರಿಸಬೇಕು ಮತ್ತು ರಾತ್ರಿ ನಿದ್ರೆಗೆ ಹೋಗಬೇಕು ಅಥವಾ ನಮಗೆ ಪರೀಕ್ಷೆಗಳು ಇದ್ದಾಗ, ಸ್ನೇಹಿತರೊಂದಿಗೆ ಸಮಯ ಕಳೆಯುವುದಕ್ಕಿಂತ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡಬೇಕು. ಹೀಗಾಗಿ, ನಮ್ಮ ಜೀವನದಲ್ಲಿ ವಿವಿಧ ವಿಷಯಗಳಿಗೆ ಆದ್ಯತೆ ನೀಡುವುದರಿಂದ ನಮ್ಮ ಜೀವನವನ್ನು ಹೆಚ್ಚು ಸುಧಾರಿಸಲು ಸಹಾಯ ಮಾಡುತ್ತದೆ ಮತ್ತು ಸವಾಲುಗಳನ್ನು ಉತ್ತಮವಾಗಿ ಎದುರಿಸಲು ನಮಗೆ ಸಹಾಯ ಮಾಡುತ್ತದೆ, ಚರ್ಚಿಸಿರಿ

- ಸಮುದಾಯವು ಎದುರಿಸುತ್ತಿರುವ ಸವಾಲುಗಳಿಗೆ ಮತ್ತು ಸಮಸ್ಯೆಯನ್ನು ಎದುರಿಸುವಲ್ಲಿ ಅದರ ಪ್ರಾಮುಖ್ಯತೆಗೆ ಸಂಘಟನೆ ಮತ್ತು ಆದ್ಯತೆಯ ತತ್ವವನ್ನು ಹೇಗೆ ಅನ್ವಯಿಸಬಹುದು ಎಂಬುದನ್ನು ಆಯೋಜಕರು ಒತ್ತಿಹೇಳಿರಿ. ಹಾಗೂ ಉದಾಹರಣೆಗಳನ್ನು ನೀಡಿರಿ, ಉದಾಹರಣೆಗೆ, ನಾವೆಲ್ಲರೂ ಒಟ್ಟಾಗಿ ಮತ್ತು ಒಂದು ಸಮಯದಲ್ಲಿ ಒಂದು ಸಮಸ್ಯೆಯನ್ನು ನಿಭಾಯಿಸಿದರೆ, ನಾವು ಬಹಳಷ್ಟು ವ್ಯತ್ಯಾಸವನ್ನು ಮಾಡಬಹುದು. ಒಂದು ಹಳ್ಳಿಯಲ್ಲಿ, ಮಹಿಳೆಯರು ಒಟ್ಟಾಗಿ ಸೇರಿ ಮದ್ಯಪಾನದ ವಿರುದ್ಧ ಹೋರಾಡಲು ನಿರ್ಧರಿಸಿದರು, ಏಕೆಂದರೆ ಆ ಸಮಸ್ಯೆಯನ್ನು ಪರಿಹರಿಸಿದರೆ, ಅವರ ಸಮುದಾಯದ ಹೆಚ್ಚಿನ ಸವಾಲುಗಳನ್ನು ಎದುರಿಸಿ ಕಾಳಜಿವಹಿಸಬಹುದೆಂದು ಅವರು ಭಾವಿಸಿದರು. ಎಲ್ಲ ಮಹಿಳೆಯರೂ ಸೇರಿ ಮದ್ಯ ಮಾರಾಟ ಮಾಡುವ ಅಂಗಡಿಗಳ ಮುಂದೆ ನಿಂತರು. ವಿವಿಧ ರೀತಿಯಲ್ಲಿ ಅವರ ಪ್ರತಿಭಟನೆಯನ್ನು ಮುಂದುವರೆಸಿದರು, ಆ ಅಂಗಡಿಗಳನ್ನು ಮುಚ್ಚಿಸಿದರು ಮತ್ತು ಗ್ರಾಮದಲ್ಲಿ ಯಾವುದೇ ಮದ್ಯ ಮಾರಾಟ ಮಾಡಲಾಗದಂತೆ ನಿಷೇದಿಸಿದರೂ. ಸಮಸ್ಯೆಯನ್ನು ಎದುರಿಸಲು ಸಾಧ್ಯವಾಯಿತು ಏಕೆಂದರೆ ಅದಕ್ಕೆ ಹೆಚ್ಚಿನ ಆದ್ಯತೆ ನೀಡಲಾಯಿತು ಮತ್ತು ಪ್ರತಿಯೊಬ್ಬರೂ ಕೇಂದ್ರೀಕೃತ ಗಮನದಲ್ಲಿ ಪ್ರಯತ್ನವನ್ನು ಮಾಡಿದರು.

- ಪ್ರಾಮುಖ್ಯತೆ, ಸಮಸ್ಯೆಯ ವಿಮರ್ಶಾತ್ಮಕತೆ, ಪಸರಿಸುವಿಕೆ, ತುರ್ತು ಪರಿಹರಿಸಲು, ಅಗತ್ಯವಿರುವ ಸಮಯ, ಪ್ರಯೋಜನ ಪಡೆಯುವ ಜನರ ಸಂಖ್ಯೆ ಇತ್ಯಾದಿಗಳಂತಹ ತತ್ವಗಳ ಆಧಾರದ ಮೇಲೆ ಆಯೋಜಕರು ಆದ್ಯತೆ ನೀಡಬೇಕಾದ ತತ್ವಗಳ ಬಗ್ಗೆ ಯೋಚಿಸಲು ಗುಂಪನ್ನು ಉತ್ತೇಜಿಸಬಹುದು.

  ಕೆಳಗೆ ನೀಡಲಾದ ಚಟುವಟಿಕೆಯನ್ನು ಬಳಸಿಕೊಂಡು ಸಮುದಾಯದಲ್ಲಿ ಎದುರಿಸುತ್ತಿರುವ ಸವಾಲುಗಳಿಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಕೆಲಸ ಮಾಡಲು ಆಯೋಜಕರು ಗುಂಪನ್ನು ಪ್ರೋತ್ಸಾಹಿಸಿರಿ.

ಚಟುವಟಿಕೆ 2



## ಉದ್ದೇಶಗಳು

- ಸಮುದಾಯದಲ್ಲಿರುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು,
- ಕೆಲಸ ಮಾಡಬೇಕಾದ ಸಮಸ್ಯೆಗಳಿಗೆ ಆದ್ಯತೆ ನೀಡಿ ಸಾಧ್ಯವಾಗಿಸುವುದು, ಮತ್ತು
- ಹದಿಹರೆಯದವರಲ್ಲಿ ವಿಮರ್ಶಾತ್ಮಕ ಚಿಂತನೆ ಮತ್ತು ಸಂಘಟನೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

## ವಿಧಾನ

METHOD

ಆಯೋಜಕರು ಶಿಕ್ಷಣಾರ್ಥಿ ಸದಸ್ಯರನ್ನು ಮೂರು ಗುಂಪುಗಳಾಗಿ ವಿಂಗಡಿಸಿ – ಹುಡುಗಿಯರಲ್ಲಿ ಒಬ್ಬರು, ಹುಡುಗರಲ್ಲಿ ಒಬ್ಬರು ಮತ್ತು ಮೂರನೇ ಗುಂಪಿನಲ್ಲಿ ಹುಡುಗರು ಮತ್ತು ಹುಡುಗಿಯರು ಇರಲಿ. ಪ್ರತಿ ಗುಂಪಿಗೆ ಚಾರ್ಟ್ ಪೇಪರ್ ನೀಡಿರಿ. ಅವರ ಸಮುದಾಯದಲ್ಲಿ ಕಾಣುವ ಅಥವಾ ನೆನಪಿಸಿಕೊಳ್ಳುವಷ್ಟು ಸವಾಲುಗಳನ್ನು ಪಟ್ಟಿ ಮಾಡಲು ಸದಸ್ಯರನ್ನು ಕೇಳಿರಿ. ಸವಾಲುಗಳು ವಾಸ್ತವಿಕವಾಗಿರಬೇಕು ಮತ್ತು ಸಮುದಾಯದ ಬೆಳವಣಿಗೆಗೆ ಸಹಾಯ ಮಾಡಬೇಕು. ಎಲ್ಲಾ ಗುಂಪುಗಳು ಎಲ್ಲಾ ಸವಾಲುಗಳನ್ನು ಪಟ್ಟಿ ಮಾಡಿದ ನಂತರ, ಆ ಸವಾಲುಗಳನ್ನು ಎದುರಿಸಲು ಅಗತ್ಯವಿರುವ ಪರಿಹಾರಗಳ ಬಗ್ಗೆ ಯೋಚಿಸಲು ಸದಸ್ಯರನ್ನು ಕೇಳಿರಿ. ಪರಿಹಾರಗಳ ಬಗ್ಗೆ ಸೃಜನಾತ್ಮಕವಾಗಿ ಮತ್ತು ವಿಮರ್ಶಾತ್ಮಕವಾಗಿ ಯೋಚಿಸಲು ಹಾಗೂ ಅವರ ಮನಸ್ಸಿಗೆ ಬರುವ ಮೊದಲ ಪರಿಹಾರವನ್ನು ಮೀರಿ ಹೋಗಿ ಯೋಚಿಸಲು ಗುಂಪುಗಳಿಗೆ ಪ್ರೋತ್ಸಾಹಿಸಿ. ಕೆಳಗಿನ ಮಾನದಂಡಗಳ ಆಧಾರದ ಮೇಲೆ ಸವಾಲುಗಳಿಗೆ ಆದ್ಯತೆ ನೀಡಲು ಶಿಕ್ಷಣಾರ್ಥಿಯರನ್ನು ಕೇಳಿರಿ:

- ಸಮುದಾಯದ ಅವಶ್ಯಕತೆ
- ಸಮುದಾಯಕ್ಕೆ ಸೌಲಭ್ಯದ ಪ್ರಾಮುಖ್ಯತೆ
- ಬದಲಾವಣೆಯನ್ನು ತರಲು ಬೇಕಾದ ಸಮಯ
- ಗುಂಪಿನ ಉತ್ಸಾಹ ಅಥವಾ ಆಸಕ್ತಿ
- ಪ್ರಯೋಜನ ಪಡೆಯುವ ಜನರ ಸಂಖ್ಯೆ
- ಅವರು ಬಳಸಲು ಇಷ್ಟಪಡುವ ಯಾವುದೇ ಇತರ ಮಾನದಂಡಗಳು

ಆಯೋಜಕರು ಗುಂಪಿಗೆ ಆದ್ಯತೆ ನೀಡಿ ಸಹಾಯ ಮಾಡಲು ಉದಾಹರಣೆಗಳನ್ನು ನೀಡಬಹುದು, ಉದಾಹರಣೆಗೆ ಗ್ರಾಮದಲ್ಲಿ ರಂಗಮಂದಿರ ಇರಬೇಕು ಎಂದು ಗುಂಪು ಭಾವಿಸಬಹುದು, ಆದರೆ ಹಳ್ಳಿಗೆ ಯಾವುದೇ ವಿದ್ಯುತ್ ಸರಬರಾಜು ಅಥವಾ ಹಳ್ಳಿಯಿಂದ ನಗರಕ್ಕೆ ಸಂಪರ್ಕ ಕಲ್ಪಿಸುವ ಸರಿಯಾದ ರಸ್ತೆಗಳಿಲ್ಲದಿದ್ದರೆ, ಈ ವಿಷಯಗಳು ರಂಗಭೂಮಿಗಿಂತ ಹಳ್ಳಿಯ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹೆಚ್ಚು ಮುಖ್ಯವಾದ ಕಾರಣ, ವಿದ್ಯುತ್ ಹಾಗೂ ರಸ್ತೆಗಳಿಗೆ ಆದ್ಯತೆ ನೀಡಬೇಕಾಗಿದೆ.

**ಗುಂಪುಗಳನ್ನು ಕೆಳಗೆ ನೀಡಲಾದ ಸ್ವರೂಪದ ಪ್ರಕಾರ ಅವರ ಪ್ರಸ್ತುತಿಯನ್ನು ರಚಿಸಲು ಕೇಳಿರಿ.**

| ಸವಾಲುಗಳು | ಆಗಬಲ್ಲ ಪರಿಹಾರಗಳು | ಆದ್ಯತೆ | ಆದ್ಯತೆ ನೀಡಲು ಕಾರಣ |
|---|---|---|---|
| | | | |
| | | | |
| | | | |

ಪ್ರತಿ ಗುಂಪು ಅವರ ಚಾರ್ಟ್‌ಗಳನ್ನು ಶಿಕ್ಷಣಾರ್ಥಿಯರಿಗೆ ಪ್ರಸ್ತುತಪಡಿಸಲು ಹೇಳಿರಿ. ಆಯೋಜಕರು ಸವಾಲುಗಳಿಗೆ ಪರಿಹಾರವಾಗಿ ಹೊಸ ಆಲೋಚನೆಗಳನ್ನು ಯೋಚಿಸಿಕೊಂಡು ಬರಲು ಶಿಕ್ಷಣಾರ್ಥಿಯರನ್ನು ಪ್ರೋತ್ಸಾಹಿಸಿರಿ.

## ಚರ್ಚಿಸಬೇಕಾದ ಅಂಶಗಳು

ಪ್ರತಿ ಗುಂಪು ವಿಭಿನ್ನ ಅಥವಾ ಒಂದೇ ರೀತಿಯ ಸವಾಲುಗಳ ಮೇಲೆ ಹೇಗೆ ಕೆಲಸ ಮಾಡಿದೆ ಮತ್ತು ಅವರ ಸಮುದಾಯ ಅಥವಾ ಹಳ್ಳಿಯಲ್ಲಿನ ಸವಾಲುಗಳನ್ನು ಹೇಗೆ ಎದುರಿಸಲು ಶಿಕ್ಷಣಾರ್ಥಿಗಳು ಬಯಸುವರು ಎಂಬುದರ ಕುರಿತು ಯೋಚಿಸಲು, ಅದೇ ಚಾರ್ಟ್ ಅನ್ನು ಹೇಗೆ ಬಳಸಬಹುದು ಎಂಬುದನ್ನು ಆಯೋಜಕರು ಚರ್ಚಿಸಿರಿ.

### ಶಿಕ್ಷಣಾರ್ಥಿಯರಿಗೆ ಕಾರ್ಯಗಳು

ಶಿಕ್ಷಣಾರ್ಥಿಯರು ಹೈಲೈಟ್ ಮಾಡಿದ ಸವಾಲುಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಲು ಮತ್ತು ಅವರ ಸಮುದಾಯದ ಇನ್ನೂ ಐದು ವ್ಯಕ್ತಿಗಳೊಂದಿಗೆ ಚರ್ಚಿಸಲು ಹಾಗೂ ಅವರು ಅದನ್ನು ಹೇಗೆ ಎದುರಿಸುತ್ತಾರೆ ಎಂಬುದನ್ನು ಕಂಡುಕೊಳ್ಳಲು ತಿಳಿಸಿರಿ.

**ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ.)**

ಪ್ರತಿಫಲನಗಳು: (ಅಧಿವೇಶನದ ಬಗ್ಗೆ ಫೆಸಿಲಿಟೇಟರ್ ಬರೆಯಬೇಕು)

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).



ಪಾಠ 52

# ಸಮುದಾಯ ಸ್ವಾಮ್ಯದ ಯೋಜನೆಯನ್ನು ವಿನ್ಯಾಸಗೊಳಿಸುವಿಕೆ

## ಪಾಠದ ಉದ್ದೇಶಗಳು

- ಸಮುದಾಯದಲ್ಲಿರುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು,
- ಶಿಕ್ಷಣಾರ್ಥಿಯರಿಗೆ ಸಮುದಾಯ ಸ್ವಾಮ್ಯದ ಯೋಜನೆಯನ್ನು ವಿನ್ಯಾಸಗೊಳಿಸಲು ಸಕ್ರಿಯಗೊಳಿಸುವುದು, ಮತ್ತು
- ಶಿಕ್ಷಣಾರ್ಥಿಯರಿಗೆ ಸಮುದಾಯದ ಸದಸ್ಯರಲ್ಲಿ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅದರಲ್ಲಿ ಅವರನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದು

**ಅವಧಿ: 95 ನಿಮಿಷಗಳು**

**ಸಮಯ ವಿಂಗಡಣೆ**

| 40 ನಿಮಿಷಗಳು | 15 ನಿಮಿಷಗಳು | 20 ನಿಮಿಷಗಳು | 20 ನಿಮಿಷಗಳು |
|---|---|---|---|
| ಚಟುವಟಿಕೆ 1 | ಚಟುವಟಿಕೆ 1 ಕುರಿತು ಚರ್ಚೆ | ಚಟುವಟಿಕೆ 2 | ಚಟುವಟಿಕೆ 2 ಕುರಿತು ಚರ್ಚೆ |

## ತರಬೇತಿಗೆ ಬೇಕಾದ ಸಾಮಗ್ರಿಗಳು

ಕಪ್ಪು ಹಲಗೆ, ಸೀಮೆಸುಣ್ಣ, A4 ಕಾಗದದ ಹಾಳೆಗಳು ಮತ್ತು ಬಣ್ಣದ ಪೆನ್ಸಿಲ್‌ಗಳು/ಸ್ಕೆಚ್ ಪೆನ್ನುಗಳು, ಚಾರ್ಟ್ ಪೇಪರ್.

## ಪರಿಕಲ್ಪನ ಟಿಪ್ಪಣಿ

ಕೊನೆಯ ಪಾಠದ ಮತ್ತು ಪ್ರಸ್ತುತಿಗಳ ಸಂಕ್ಷಿಪ್ತ ಪುನರಾವರ್ತನೆಯೊಂದಿಗೆ ಆಯೋಜಕರು ತರಗತಿ ಪ್ರಾರಂಭಿಸುವುದು, ಶಿಕ್ಷಣಾರ್ಥಿ ಗುಂಪುಗಳು ಕಳೆದ ತರಗತಿಯಲ್ಲಿ ಚಾರ್ಟ್‌ಗಳನ್ನು ಪ್ರಸ್ತುತಪಡಿಸಿದರು. ಆಯೋಜಕರು ಆ ಚಾರ್ಟ್‌ಗಳನ್ನು ಹಂಚಿಕೊಂಡು ಹಾಗೂ ಸದಸ್ಯರು ಮತ್ತೆ ಏನನ್ನಾದರೂ ಬದಲಾಯಿಸಲು ಬಯಸುತ್ತಾರೆಯೇ ಅಥವಾ ಅದೇ ಸಮಸ್ಯೆಗೆ ಆದ್ಯತೆ ನೀಡಲು ಬಯಸುತ್ತಾರೆಯೇ ಎಂಬುದರ ಕುರಿತು ಚರ್ಚೆ ನಡೆಸುವುದು. ಗುಂಪಿನ ಒಮ್ಮತವನ್ನು ತಲುಪಿದಂತೆ ಹಾಗೂ ಶಿಕ್ಷಣಾರ್ಥಿಯರು ಯಾವ ಸಮಸ್ಯೆಯ ಮೇಲೆ ಕೆಲಸ ಮಾಡಲು ಬಯಸುತ್ತಾರೆ ಎಂಬುದನ್ನು ಆಯೋಜಕರು ಸ್ಪಷ್ಟಪಡಿಸಿಕೊಳ್ಳುವುದು.

ಸಮುದಾಯಕ್ಕಾಗಿ ಉದ್ದೇಶಿಸಿರುವ ಯಾವುದೇ ಯೋಜನೆಯಲ್ಲಿ ಸಮುದಾಯವನ್ನು ಒಳಗೊಳ್ಳುವುದು ಏಕೆ ಮುಖ್ಯ ಎಂಬುದನ್ನು ಆಯೋಜಕರು ತಿಳಿಸುವರು, ಯಾಕಂದರೆ ಅಡೆತಡೆಗಳನ್ನು ತಗ್ಗಿಸಲು ಏಕೈಕ ಮಾರ್ಗವೆಂದರೆ ಸಮುದಾಯದ ಜನರನ್ನೇ ಒಳಗೊಳ್ಳುವುದಾಗಿದೆ. ಯೋಜನೆಯನ್ನು ಪ್ರಾರಂಭಿಸಿದ ಜನರು ಇನ್ನು ಮುಂದೆ ಇಲ್ಲದಿದ್ದರೂ ಸಹ ತೊಂದರೆಯಾಗದೆ ಯೋಜನೆಯ ನಿರಂತರತೆಯನ್ನು ಖಚಿತಪಡಿಸುತ್ತದೆ, ಸಮುದಾಯದಿಂದ ಕಡಿಮೆ ಪ್ರತಿರೋಧವಿರುತ್ತದೆ, ಸಮುದಾಯವು ಮಾಲೀಕತ್ವವನ್ನು ತೆಗೆದುಕೊಳ್ಳುತ್ತದೆ ಮತ್ತು ಸರ್ಕಾರವು ಪ್ರಾರಂಭಿಸಿದ ಯೋಜನೆಗಳಿಗೆ ಹೋಲಿಸಿದರೆ ಹೆಚ್ಚಿನ ಸಮುದಾಯ ಸ್ವಾಮ್ಯದ ಯೋಜನೆಗಳು ಹೆಚ್ಚಿನ ಯಶಸ್ಸಿನ ಪ್ರಮಾಣವನ್ನು ತೋರಿಸಿವೆ. ಸಮುದಾಯ ಸ್ವಾಮ್ಯದ ಯೋಜನೆಯನ್ನು ನಡೆಸಲು ಸಮುದಾಯದವರೇ ಜವಾಬ್ದಾರರು ಎಂದು ಭಾವಿಸುವ ಇತರ ಕಾರಣಗಳೊಂದಿಗೆ ಬರುವಂತೆ ಆಯೋಜಕರು ಶಿಕ್ಷಣಾರ್ಥಿಯರನ್ನು ಪ್ರೋತ್ಸಾಹಿಸಿರಿ.

**ಚರ್ಚೆಯ ನಂತರ, ಆಯೋಜಕರು ಅವರು ನಿರ್ಧರಿಸಿದ ಸಮಸ್ಯೆಯನ್ನು ಎದುರಿಸಲು ಸಮುದಾಯ ಆಧಾರಿತ ಯೋಜನೆಯನ್ನು ವಿನ್ಯಾಸಗೊಳಿಸಲು ಕೆಳಗೆ ನೀಡಲಾದ ಹಂತಗಳನ್ನು ವಿವರಿಸಿರಿ.**

## ಸಮುದಾಯ ಆಧಾರಿತ ಯೋಜನೆಯನ್ನು ವಿನ್ಯಾಸಗೊಳಿಸಲು ಈ ಕೆಳಗಿನ ಹಂತಗಳನ್ನು ಒಳಗೊಂಡಿರುವವು:

**ಸಮಸ್ಯೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದು.** ಈ ಹಂತವು ಎಲ್ಲಾ ಇತರ ಹಂತಗಳಿಗೆ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ. ಸಮಸ್ಯೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದು ಬಹಳ ಮುಖ್ಯ, ಉದಾಹರಣೆಗೆ, ಸಮಸ್ಯೆಯು ಸಮುದಾಯದಲ್ಲಿನ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ್ದರೆ, ಸಮಸ್ಯೆಯೆಂದರೆ ಜನರು ಹೆಚ್ಚಾಗಿ ಅನಾರೋಗ್ಯಕ್ಕೆ ಒಳಗಾಗುತ್ತಿದ್ದಾರೆಯೇ ಅಥವಾ ಸಮಸ್ಯೆಯು ಸ್ವಚ್ಛತೆ ಹಾಗೂ ನೈರ್ಮಲ್ಯದ ಕೊರತೆಯಿಂದಾಗಿಯೇ ಎಂಬುದನ್ನು ನಾವು ಸ್ಪಷ್ಟಪಡಿಸಕೊಳ್ಳಬೇಕು. ಆಗ ಯಾವ ಸಮಸ್ಯೆಯಿಂದ ಸಮುದಾಯ ಅನಾರೋಗ್ಯಕ್ಕೆ ತುತ್ತಾಗುತ್ತಿದರೆ ಎಂದು ಸ್ಪಷ್ಟತೆ ಸಿಗುವುದು.

**ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದು:** ಒಮ್ಮೆ ನೀವು ಸಮಸ್ಯೆಯನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿದ ನಂತರ, ನಿಮ್ಮ ಗುಂಪಿನೊಂದಿಗೆ ನೀವು ಬುದ್ದಿಮಂಥನ ಮಾಡಬೇಕು ಮತ್ತು ಸಾಧ್ಯವಾದಷ್ಟು ಪರಿಹಾರಗಳೊಂದಿಗೆ ಬರಬೇಕು. ಪರಿಹಾರಗಳನ್ನು ಪಟ್ಟಿ ಮಾಡಲಾಗಿರುವುದರಿಂದ, ಅದರ ಕಾರ್ಯಸಾಧ್ಯತೆ, ಲಭ್ಯತೆ ಮತ್ತು ಉಪಯುಕ್ತತೆಯ ಆಧಾರದ ಮೇಲೆ, ಯಾವುದು ಹೆಚ್ಚು ಕಾರ್ಯಸಾಧ್ಯವಾದ ಪರಿಹಾರ ಮತ್ತು ಅವರು ಕೆಲಸ ಮಾಡಲು ಬಯಸುವ ಪರಿಹಾರಗಳನ್ನು ಗುಂಪು ನಿರ್ಧರಿಸುವುದು.

**ಉದ್ದೇಶಗಳನ್ನು ವ್ಯಾಖ್ಯಾನಿಸುವುದು:** ಗುರುತಿಸಲಾದ ಪರಿಹಾರಗಳ ಆಧಾರದ ಮೇಲೆ ಈ ಯೋಜನೆಯಿಂದ ಅವರು ಏನನ್ನು ಸಾಧಿಸಲು ಬಯಸುತ್ತಾರೆ ಎಂಬುದನ್ನು ಗುಂಪು ಒಟ್ಟುಗೂಡಿಸಬೇಕು ಮತ್ತು ಬರೆಯಬೇಕು. ಉದ್ದೇಶಗಳನ್ನು ವ್ಯಾಖ್ಯಾನಿಸುವುದು ಗುಂಪಿನ ಪ್ರಗತಿಯನ್ನು ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತದೆ ಮತ್ತು ಅವರು ಸರಿಯಾದ ಮಾರ್ಗದಲ್ಲಿ ಹೋಗುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸುವವು. ಗುರಿಗಳನ್ನು ಆದ್ಯತೆಯ ಆಧಾರದ ಮೇಲೆ ವ್ಯಾಖ್ಯಾನಿಸಬಹುದು ಮತ್ತು ಗುಂಪು ನಿರ್ದಿಷ್ಟ ಗುರಿಗಳನ್ನು ಸಾಧಿಸಿದಂತೆ ಅಥವಾ ಸಮಯದ ಅಗತ್ಯಕ್ಕೆ ಅನುಗುಣವಾಗಿ ಆದ್ಯತೆಗಳನ್ನು ಬದಲಾಯಿಸಬಹುದು.

**ಸಂಪನ್ಮೂಲಗಳು ಮತ್ತು ಅಡೆತಡೆಗಳನ್ನು ಮೌಲ್ಯಮಾಪನ ಮಾಡುವುದು:** ಲಭ್ಯವಿರುವ ಸಂಪನ್ಮೂಲಗಳು ಮತ್ತು ಎದುರಿಸುವ ಅಡೆತಡೆಗಳ ಬಗ್ಗೆ ಗುಂಪು ಯೋಚಿಸಬೇಕು. ಸಂಪನ್ಮೂಲಗಳು ಸಮುದಾಯದ ಕೆಲವು ಪ್ರಭಾವಿತರು ಅಥವಾ ಕೆಲಸ ಮಾಡಲು ಸಿದ್ಧರಿರುವರು, ಸಮುದಾಯದಲ್ಲಿ ಸಾಮಾನ್ಯರು, ಸಂಪರ್ಕಗಳು ಹೊಂದಿರುವ ಸರ್ಕಾರಿ ಅಧಿಕಾರಿಗಳು ಇತ್ಯಾದಿ. ಆದರೆ, ಅಡೆತಡೆಗಳು ಸಮುದಾಯದ ಕೆಲವು ಸದಸ್ಯರಿಂದ ಪ್ರತಿರೋಧವಾಗಿರಬಹುದು, ಪ್ರಕ್ರಿಯೆಯ ಬಗ್ಗೆ ಮಾಹಿತಿಯ ಕೊರತೆಯಿರಬಾರದು, ಇತ್ಯಾದಿ. ಯೋಜನೆಯ ಸಮಯದಲ್ಲಿ ಅವರು ಎದುರಿಸುವ ವಿವಿಧ ವಿಷಯಗಳಿಗೆ ಅವರು ಸಿದ್ಧರಾಗಲು ಇದು ಅವರಿಗೆ ಉತ್ತಮ ಕ್ರಿಯಾ ಯೋಜನೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ. ಸಂಪನ್ಮೂಲಗಳನ್ನು ಹೇಗೆ ಹೆಚ್ಚು ಪರಿಣಾಮಕಾರಿಯಾಗಿ ಬಳಸುವುದು ಮತ್ತು ಅಡೆತಡೆಗಳನ್ನು ನಿವಾರಿಸುವುದು ಹೇಗೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಯೋಜನೆಯನ್ನು ವಿನ್ಯಾಸಗೊಳಿಸಬಹುದು. ಅವರು ಯೋಜನೆಯ ಬಗ್ಗೆ ಹೋಗಲು ಅಗತ್ಯವಿರುವ ಮಾಹಿತಿಯನ್ನು ಸಹ ಸಂಗ್ರಹಿಸಬಹುದು, ಉದಾಹರಣೆಗೆ, ಹಣಕಾಸು ಸಂಗ್ರಹಿಸುವುದು ಅಥವಾ ಸರ್ಕಾರಿ ಏಜೆನ್ಸಿಗಳು ಅಥವಾ ಎನ್‌ಜಿಒಗಳನ್ನು ಒಳಗೊಳ್ಳುವುದು ಇತ್ಯಾದಿ.

**ಸಮುದಾಯವನ್ನು ಒಳಗೊಳ್ಳುವುದು:** ಗುಂಪು ಸಮುದಾಯವನ್ನು ಸಂಪರ್ಕಿಸಬೇಕು ಮತ್ತು ಅವರ ಮನಸ್ಸಿನಲ್ಲಿ ಒಂದು ಸಂಕ್ಷಿಪ್ತ ಕ್ರಿಯೆಯ ಯೋಜನೆಯನ್ನು ಸಿದ್ಧವಾದ ನಂತರ ಅದನ್ನು ಹೇಳಬೇಕು. ಅವರು ಕ್ರಿಯಾ ಯೋಜನೆಯಲ್ಲಿ ತರಬೇಕಾದ ಬದಲಾವಣೆಗಳಿಗೆ ಮುಕ್ತವಾಗಿರಬೇಕು. ಸಮುದಾಯವು ತನಗೆ ಏನು ಬೇಕು ಮತ್ತು ಮೊದಲು ಏನು ಮಾಡಬೇಕು ಎಂಬುದರ ಕುರಿತು ವಿಭಿನ್ನ ಕಲ್ಪನೆಯನ್ನು ಹೊಂದಿರಬಹುದು. ಯೋಜನೆಯೊಂದಿಗೆ ಮುಂದುವರಿಯುವ ಮೊದಲು ಸಮುದಾಯದ ಆಲೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಮುಖ್ಯವಾಗಿದೆ. ನಿಮ್ಮ ವಿಷಯದಲ್ಲಿ ನೀವು ಈಗಾಗಲೇ ಸಮುದಾಯವನ್ನು ಸಂಪರ್ಕಿಸಿದ್ದೀರಿ ಮತ್ತು ಅವರ ಸವಾಲುಗಳನ್ನು ಕಂಡುಕೊಂಡಿದ್ದೀರಿ, ಇಲ್ಲದಿದ್ದರೆ ಸಮಸ್ಯೆಯನ್ನು ಸ್ವತಃ ವಿವರಿಸುವ ಮೊದಲು ಪ್ರಾಥಮಿಕ ಸಮೀಕ್ಷೆಯನ್ನು ಮಾಡುವುದು ಒಳ್ಳೆಯದು. ಗುಂಪು ಮತ್ತು ಸಮುದಾಯದೊಳಗಿನ ಪ್ರಮುಖ ಸದಸ್ಯರು, ಅವರ ಪಾತ್ರಗಳು, ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ವ್ಯಾಖ್ಯಾನಿಸುವುದು ಯೋಜನೆಯನ್ನು ಅರ್ಥಮಾಡಿಕೊಳ್ಳಲು ಮತ್ತು ನಡೆಸಿಕೊಂಡು ಹೋಗಲು ಸಹಾಯ ಮಾಡುತ್ತದೆ.

**ನಿಖರವಾದ ಏಜೆನ್ಸಿಗಳನ್ನು ಬೇಟಿಮಾಡುವುದು:** ಸಮುದಾಯದ ಸದಸ್ಯರು ಮತ್ತು ಯೋಜಕರು ಸೇರಿದಂತೆ ವ್ಯಾಖ್ಯಾನಿಸಲಾದ ಗುಂಪು ನಿಮ್ಮ ಯೋಜನೆಯ ಯೋಜನೆಯೊಂದಿಗೆ ಎನ್‌ಜಿಒಗಳು, ಸರ್ಕಾರಿ ಏಜೆನ್ಸಿಗಳಂತಹ ಉದ್ದೇಶಿತ ಏಜೆನ್ಸಿಗಳ ಬಗ್ಗೆ ಯೋಚಿಸಲು ಪ್ರಾರಂಭಿಸಬೇಕು. ತಂಡವು ಅವರಿಗೆ ಏಜೆನ್ಸಿಯಿಂದ ಯಾವ ರೀತಿಯ ಸಹಾಯ ಬೇಕು ಮತ್ತು ಯೋಜನೆಯ ಬಗ್ಗೆ ಅವರು ಏನು ಹೇಳುತ್ತಾರೆ ಎಂಬುದರ ಕುರಿತು ಸ್ಪಷ್ಟವಾಗಿರಬೇಕು.

**ಕ್ರಿಯಾ ಯೋಜನೆಯನ್ನು ಕೈಗೊಳ್ಳುವುದು:** ಏಜೆನ್ಸಿಗಳನ್ನು ಸಂಪರ್ಕಿಸಿದ ನಂತರ, ಕ್ರಿಯಾ ಯೋಜನೆಯನ್ನು ಪ್ರಾರಂಭಿಸಬಹುದು. ತಂಡವು ಏಜೆನ್ಸಿಗಳು ಅಥವಾ ಸರ್ಕಾರದ ಅನುಮತಿಗಾಗಿ ಕಾಯಬೇಕಾಗಿಲ್ಲ. ಯಾವ ಉದ್ದೇಶಕ್ಕೆ ನೋಡುತ್ತಿದ್ದೇವೆ ಅವರು ಆ ಯೋಜನೆಯ ಇತರ ಭಾಗಗಳಲ್ಲಿ ಕೆಲಸ ಮಾಡಲು ಪ್ರಾರಂಭಿಸಬಹುದು. ಉದಾಹರಣೆಗೆ, ನಾವು ಸಮುದಾಯದಲ್ಲಿ ನೈರ್ಮಲ್ಯದ ಪರಿಸ್ಥಿತಿಗಳನ್ನು ಕಾಪಾಡಿಕೊಳ್ಳಲು ನೋಡುತ್ತಿದ್ದರೆ, ನಾವು ಜಾಗೃತಿಯನ್ನು ಹರಡಲು ಪ್ರಾರಂಭಿಸಬಹುದು, ತುಂಬಾ ಕೊಳಕು ಇರುವ ಸ್ಥಳಗಳನ್ನು ಗುರುತಿಸುವುದು ಮತ್ತು ಅಲ್ಲಿ ತೆಗೆದುಕೊಳ್ಳಬೇಕಾದ ಕ್ರಮಗಳು ಬಗ್ಗೆ ಯೋಜಿಸುವುದು.

**ನಿರಂತರ ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಮರುಪರಿಶೀಲನೆ:** ತಂಡದ ಸದಸ್ಯರು ನಿರಂತರವಾಗಿ ಯೋಜನೆಯ ಉದ್ದೇಶಗಳು, ಯಶಸ್ಸು, ಹಣ ಒಳಗೊಂಡಂತೆ ಮೌಲ್ಯಮಾಪನ ಮಾಡಿದರೆ ಮಾತ್ರ ಯಾವುದೇ ಯೋಜನೆ ಯಶಸ್ವಿಯಾಗುತ್ತದೆ. ಯೋಜನೆಯ ವರದಿಯನ್ನು ಸಮುದಾಯಕ್ಕೆ ಪ್ರಸ್ತುತಪಡಿಸಬೇಕು, ಅವರ ಕಾರ್ಯಗಳು ಹೇಗೆ ಫಲಿತಾಂಶಗಳನ್ನು ನೀಡುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವವು. ಗುಂಪಿನ ಅಗತ್ಯಗಳಿಗೆ ಅನುಗುಣವಾಗಿ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆಯ ನಂತರ ಉದ್ದೇಶಗಳನ್ನು ಮರು ವ್ಯಾಖ್ಯಾನಿಸಬಹುದು.

## ಚಟುವಟಿಕೆ 1



### ಉದ್ದೇಶಗಳು

- ಸಮುದಾಯದಲ್ಲಿರುವ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸುವುದು,
- ಶಿಕ್ಷಣಾರ್ಥಿಯರಿಗೆ ಸಮುದಾಯ ಸ್ವಾಮ್ಯದ ಯೋಜನೆಯನ್ನು ವಿನ್ಯಾಸಗೊಳಿಸಲು ಸಕ್ರಿಯಗೊಳಿಸಲು, ಮತ್ತು
- ಶಿಕ್ಷಣಾರ್ಥಿಯರನ್ನು ಸಮುದಾಯದ ಸದಸ್ಯರಲ್ಲಿ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಅದರಲ್ಲಿ ಅವರನ್ನು ತೊಡಗಿಸಿಕೊಳ್ಳಲು ಪ್ರೋತ್ಸಾಹಿಸುವುದು.

METHOD

### ವಿಧಾನ

ಆಯೋಜಕರು ಶಿಕ್ಷಣಾರ್ಥಿಯರನ್ನು 4–5 ಸದಸ್ಯರ ಗುಂಪುಗಳಾಗಿ ವಿಂಗಡಿಸಿರಿ. ಕಳೆದ ತರಗತಿಯಲ್ಲಿ ನಡೆದ ಚರ್ಚೆಗಳ ಆಧಾರದ ಮೇಲೆ ಅವರು ಕೆಲಸ ಮಾಡಲು ಇಷ್ಟಪಡುವ ಸಮಸ್ಯೆಯನ್ನು ಆಯ್ಕೆ ಮಾಡಲು ಪ್ರತಿ ಗುಂಪನ್ನು ಕೇಳಿರಿ. ಆಯೋಜಕರು ವಿವಿಧ ಗುಂಪುಗಳಿಗೆ ಚಾರ್ಟ್‌ಗಳನ್ನು ಹಾಕಬಹುದು: ಶಿಕ್ಷಣಾರ್ಥಿಯರು ಕೆಲಸ ಮಾಡಲು, ಸಮಸ್ಯೆಯನ್ನು ನಿರ್ಧರಿಸಲು ಸಹಾಯ ಮಾಡುವಂತೆ ಚಾರ್ಟ್‌ನ್ನು ವಿನ್ಯಾಸಗೊಳಿಸಲಾಗಿದೆ. ಗುಂಪುಗಳು ಅವರ ಸವಾಲುಗಳನ್ನು ನಿರ್ಧರಿಸಿದ ನಂತರ, ಒತ್ತಿಹೇಳಿದ ಸಮಸ್ಯೆಯನ್ನು ಎದುರಿಸಲು ಸಮುದಾಯ ಆಧಾರಿತ ಯೋಜನೆಯನ್ನು ವಿನ್ಯಾಸಗೊಳಿಸಲು ಶಿಕ್ಷಣಾರ್ಥಿಯರನ್ನು ಕೇಳಿರಿ.

ಶಿಕ್ಷಣಾರ್ಥಿಯರು ಎಲ್ಲಾ ಹಂತಗಳನ್ನು ವಿನ್ಯಾಸಗೊಳಿಸಬೇಕು ಮತ್ತು ಅವರ ಯೋಜನೆಯ ಸಂಪೂರ್ಣ ಘಟ್ಟಗಳ ಬಗ್ಗೆ ಯೋಚಿಸಬೇಕು. ಗುಂಪುಗಳು ಅವರ ಯೋಜನೆಯನ್ನು ಹೆಸರಿಸಲು ಮತ್ತು ಅದಕ್ಕೆ ವ್ಯಾಖ್ಯೆಯನ್ನು ವಿನ್ಯಾಸಗೊಳಿಸಲು ಸಹ ಕೇಳಬಹುದು. ಇದನ್ನು ಮಾಡಲು ಅವರಿಗೆ ಸುಮಾರು 30–40 ನಿಮಿಷಗಳನ್ನು ನೀಡಿರಿ. ಯೋಜನೆಯ ವಿವಿಧ ಹಂತಗಳನ್ನು ವಿವರಿಸಲು ಚಿತ್ರ ಕಾರ್ಡ್‌ಗಳನ್ನು ಮಾಡಲು ಗುಂಪುಗಳನ್ನು ಕೇಳಿರಿ

ಪ್ರತಿ ಗುಂಪನ್ನು ಅವರು ಮಾಡಿದ ಚಿತ್ರ ಕಾರ್ಡ್‌ಗಳ ಸಹಾಯದಿಂದ ಇತರ ಶಿಕ್ಷಣಾರ್ಥಿಯರಿಗೆ ವಿಚಾರವನ್ನು ಪ್ರಸ್ತುತಪಡಿಸಲು ಕೇಳಿರಿ, ಆದರೆ ಇತರ ಗುಂಪುಗಳು ಆಯೋಜಕರು ಜೊತೆಗೆ ರಚನಾತ್ಮಕ ಸಲಹೆಗಳನ್ನು ಗುಂಪಿಗೆ ನೀಡಬಹುದು.



# ಚರ್ಚಿಸಬೇಕಾದ ಅಂಶಗಳು:

## ಆಯೋಜಕರು

ಯೋಜನೆಯ ವಿನ್ಯಾಸದಲ್ಲಿ ಯೋಜನೆಯ ಪ್ರಾಮುಖ್ಯತೆಯನ್ನು ಚರ್ಚಿಸುವುದು. ಸಮುದಾಯವು ಮೊದಲಿನಿಂದಲೂ ಹೇಗೆ ತೊಡಗಿಸಿಕೊಳ್ಳಬೇಕು ಎಂಬುದನ್ನು ಸಹ ಆಯೋಜಕರು ಒತ್ತಿಹೇಳಬೇಕು, ಅಂದರೆ ಅಗತ್ಯಗಳನ್ನು ಸಹ ವ್ಯಾಖ್ಯಾನಿಸಿರಿ. ಇದು ಸಮುದಾಯದ ಸದಸ್ಯರಲ್ಲಿ ಮಾಲೀಕತ್ವದ ಭಾವನೆಯನ್ನು ಹೆಚ್ಚಿಸುತ್ತದೆ. ಯಾರನ್ನೂ ಒಳಗೊಳ್ಳದೆ ಯೋಜನೆಯನ್ನು ಪ್ರಾರಂಭಿಸುವುದು ಹೇಗೆ ಸುಲಭ ಎಂದು ತೋರುತ್ತದೆ, ಆದರೆ ಅದು ದೀರ್ಘಾವಧಿಯಲ್ಲಿ ಕೆಲಸ ಆಗುವುದಿಲ್ಲ ಎಂದು ಆಯೋಜಕರು ಒತ್ತಿಹೇಳುವುದು. ಯೋಜನೆಯ ಕಾರ್ಯಸಾಧ್ಯತೆ ಮತ್ತು ಸಮರ್ಥನೀಯತೆಯು ಸಮುದಾಯದ ಒಳಗೊಳ್ಳುವಿಕೆಯ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿರುವುದು ಎಂದು ಆಯೋಜಕರು ಗಮನಸೆಳೆದಿದ್ದಾರೆ.

ಉದಾಹರಣೆಗೆ, "ಭಾರತದ ಗುಜರಾತ್‌ನಲ್ಲಿ, 1980 ರ ದಶಕದಲ್ಲಿ, ವಾರ್ಷಿಕವಾಗಿ ಸರಾಸರಿ 18,000 ಅರಣ್ಯ ಅಪರಾಧಗಳು ದಾಖಲಾಗಿವೆ: 10,000 ಮರದ ಕಳ್ಳತನ, 2,000 ಮೇಯಿಸುವಿಕೆ, 700 ಬೆಂಕಿ ಮತ್ತು 5,300 ಇತರ ಅಪರಾಧಗಳು. ಸಮುದಾಯಗಳು ಮತ್ತು ಅಪರಾಧಿಗಳೊಂದಿಗೆ ಘರ್ಷಣೆಯಲ್ಲಿ ಇಪ್ಪತ್ತು ಅರಣ್ಯ ಅಧಿಕಾರಿಗಳು ಕೊಲ್ಲಲ್ಪಟ್ಟರು ಮತ್ತು ಅರಣ್ಯ ಅಧಿಕಾರಿಗಳ ಮೇಲೆ ಹಲ್ಲೆಗಳು ಆಗಾಗ್ಗೆ ನಡೆಯುತ್ತಿದ್ದವು. ಇದರ ಪ್ರತಿಕ್ರಿಯೆಯಾಗಿ, ಸಮುದಾಯಗಳೊಂದಿಗೆ ಜಂಟಿ ನಿರ್ವಹಣೆಯ ಪ್ರಯೋಗವನ್ನು ಸಂರಕ್ಷಣಾಧಿಕಾರಿ ಆರ್.ಎಸ್. ಪಠಾಣ್. ಇದರಲ್ಲಿ ಸಮುದಾಯ ಸಭೆಗಳು, ವ್ಯಾಪಕವಾಗಿ ಪ್ರಚಾರಗೊಂಡ ಅರಣ್ಯ ಸಂರಕ್ಷಣಾ ಸಮಿತಿಗಳ ರಚನೆ ಮತ್ತು ಸ್ಥಳೀಯ ಗುಂಪುಗಳೊಂದಿಗೆ ಮರದ ಆದಾಯದ 25 ಪ್ರತಿಶತದಷ್ಟು ಲಾಭ ಹಂಚಿಕೆಯೆಂದು ತಿಳಿಸಿದರು. ಇದರ ಪರಿಣಾಮವಾಗಿ, ಅಧಿಕಾರಿಗಳು ಮತ್ತು ಸಮುದಾಯ ಗುಂಪುಗಳ ನಡುವಿನ ಸಂಘರ್ಷ ಕಡಿಮೆಯಾಯಿತು, ಸಮುದಾಯ ಗುಂಪುಗಳು ಅರಣ್ಯಗಳಲ್ಲಿ ಗಸ್ತು ತಿರುಗುವ ಜವಾಬ್ದಾರಿಯನ್ನು ವಹಿಸಿಕೊಂಡವು ಮತ್ತು ಭೂಮಿಯ ಉತ್ಪಾದಕತೆ ಹಾಗೂ ಹಳ್ಳಿಗಳಿಗೆ ಹಿಂತಿರುಗುವಿಕೆಯು ತೀವ್ರವಾಗಿ ಹೆಚ್ಚಾಯಿತು. ಒಂದು ವರ್ಷದಲ್ಲಿ, ಎಂಬತ್ತೆಂಟು ಕುಟುಂಬಗಳ ಒಂದು ಹಳ್ಳಿಯು ಹನ್ನೆರಡು ಟನ್ ಉರುವಲು, ಐವತ್ತು ಟನ್ ಮೇವು ಮತ್ತು ಇತರ ಅರಣ್ಯ ಉತ್ಪನ್ನಗಳನ್ನು ಕೊಯ್ಲು ಮಾಡಿ ಮಾರಾಟ ಮಾಡಿತು, ಹಾಗೆಯೇ ತೇಗ ಮತ್ತು ಬಿದಿರಿನ ಮರಗಳನ್ನು ನೆಡುವುದು ಮತ್ತು ರಕ್ಷಿಸುವುದು (ಪಠಾಣ್ ಮತ್ತು ಇತರರು, 1993)" ಕೂಡ ಆರಂಭವಾಯಿತು ಅಥವಾ ತಮಿಳುನಾಡಿನಲ್ಲಿ, ಸಮುದಾಯ ಆಧಾರಿತ ಪೌಷ್ಟಿಕಾಂಶದ ಕಾರ್ಯಕ್ರಮವು 9000 ಹಳ್ಳಿಗಳಲ್ಲಿ ಅಪೌಷ್ಟಿಕತೆಯನ್ನು ಕಡಿಮೆ ಮಾಡಲು ಕಾರಣವಾಯಿತು, ಅದ್ದರಿಂದ ಸಮುದಾಯದಿಂದ 20 ಮಹಿಳೆಯರನ್ನು ಆರೋಗ್ಯ ಕಾರ್ಯಕರ್ತರಾಗಿ ನೇಮಿಸಲಾಯಿತು ಮತ್ತು ಅವರನ್ನು ಸಮುದಾಯಕ್ಕೆ ಹೊಣೆಗಾರರನ್ನಾಗಿ ಮಾಡಲಾಯಿತು. ಅವರು ಮೊದಲು ಜಾಗೃತಿಯನ್ನು ಹರಡಲು ಮತ್ತು ನಂತರ ಆಹಾರ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿದ್ದರು.

ಎಲ್ಲಾ ಚಟುವಟಿಕೆಗಳು ಮತ್ತು ನಿಧಿಗಳ ದಾಖಲೆಗಳನ್ನು ನಿರ್ವಹಿಸುವುದು ಹೇಗೆ ಶ್ರದ್ಧೆಯಿಂದ ಕಾಳಜಿ ವಹಿಸಬೇಕೆಂಬುದು ಪ್ರಮುಖ ಅಂಶವಾಗಿದೆ ಎಂದು ಒತ್ತಿಹೇಳುವುದು. ಯಾವುದೇ ತಪ್ಪುಗಳು ಪುನರಾವರ್ತನೆಯಾಗದಂತೆ ಅವರು ತಮ್ಮ ನಡುವೆ ಜವಾಬ್ದಾರಿಗಳನ್ನು ತಿರುಗಿಸಬಹುದು. ಸಭೆಯ ನಿಮಿಷಗಳು ಮತ್ತು ಗುಂಪು ನಡೆಸಿದ ಇತರ ಚಟುವಟಿಕೆಗಳನ್ನು ದಾಖಲಿಸುವುದು ಮತ್ತು ಅದನ್ನು ಸದಸ್ಯರು ಮತ್ತು ಸಮುದಾಯದೊಂದಿಗೆ ಹಂಚಿಕೊಳ್ಳುವುದು ಗುಂಪಿನ ಜವಾಬ್ದಾರಿ ಮತ್ತು ಕ್ರಿಯೆಯನ್ನು ಹೆಚ್ಚಿಸುವವು.

ನಿಗದಿಪಡಿಸಿದ ಗುರಿಗಳನ್ನು ಸಾಧಿಸಲು ಅವರನ್ನು ಅವರೇ ಪ್ರೇರೇಪಿಸುವ ಅಗತ್ಯವನ್ನು ಒತ್ತಿಹೇಳಿರಿ ಮತ್ತು ಅವರು ಪ್ರಗತಿಯನ್ನು ಮಾಡಲು ಸಾಧ್ಯವಾಗದಿದ್ದರೆ ಪ್ರೇರೇಪಿಸಬಾರದು. ಸಾಮಾಜಿಕ ಬದಲಾವಣೆಯನ್ನು ತರಲು ಸಮಯ ತೆಗೆದುಕೊಳ್ಳುತ್ತದೆ ಮತ್ತು ಅವರು ಸರಿ ಎಂದು ಭಾವಿಸುವವರ ಪರವಾಗಿ ನಿಲ್ಲುವ ಸಾಮರ್ಥ್ಯ ಹೊಂದಿರುವ ಜನರು ಮಾತ್ರ ಅದನ್ನು ಮಾಡಲು ಸಾಧ್ಯವಾಗುತ್ತದೆ.

### ಯಶಸ್ವಿ ಸಮುದಾಯ ಯೋಜನೆಯ ಕೀಲಿಕೈ





## ಚಟುವಟಿಕೆ 2

### ಉದ್ದೇಶಗಳು

- ಶಿಕ್ಷಣಾರ್ಥಿಯರಿಗೆ ಸಮುದಾಯದ ಸದಸ್ಯರನ್ನು ಒಳಗೊಳ್ಳಲು ಸಹಾಯ ಮಾಡುವುದು, ಮತ್ತು
- ಶಿಕ್ಷಣಾರ್ಥಿಯರಿಗೆ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

METHOD

### ವಿಧಾನ

ಯೋಜನೆಯೊಂದಿಗೆ ಅವರು ಸಿದ್ಧರಾಗಿರುವಂತೆ, ಸಮುದಾಯವನ್ನು ಒಳಗೊಳ್ಳುವ ಮಾರ್ಗಗಳನ್ನು ಕಂಡುಹಿಡಿಯಲು ನಾವು ಪ್ರಯತ್ನಿಸೋಣ ಎಂದು ಆಯೋಜಕರು ಶಿಕ್ಷಣಾರ್ಥಿಯ ಗುಂಪಿನೊಂದಿಗೆ ಹಂಚಿಕೊಳ್ಳಿರಿ. ಅವರು ಚಟುವಟಿಕೆ 1 ರಲ್ಲಿ ವಿಂಗಡಿಸಲಾದ ಅದೇ ಗುಂಪುಗಳಲ್ಲಿ ಕೆಲಸ ಮಾಡಬೇಕಾಗುತ್ತದೆ ಮತ್ತು ಸಮುದಾಯವನ್ನು ಒಳಗೊಳ್ಳಲು ಅವರು ಬಳಸುವ ವಿಧಾನಗಳನ್ನು ಪಟ್ಟಿಮಾಡಬೇಕು. ಅವರು ಸಮುದಾಯವನ್ನು ಒಳಗೊಳ್ಳುವ ಕನಿಷ್ಠ ಎರಡು ಸೃಜನಶೀಲ ವಿಧಾನಗಳನ್ನು ಪ್ರಸ್ತುತಪಡಿಸಬೇಕು ಮತ್ತು ಬೀದಿ ನಾಟಕ, ಹಾಡುಗಳು, ಭಿತ್ತಿಚಿತ್ರಗಳು ಮುಂತಾದ ಸಮುದಾಯದಲ್ಲಿ ಅವರ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಬೇಕು.

### ವಿಸ್ತರಣೆ

ಸಮುದಾಯದ ಸದಸ್ಯರಂತೆ ನಟಿಸುವ ಮತ್ತು ಸಮುದಾಯದ ಸದಸ್ಯರನ್ನು ಯೋಜನೆಯಲ್ಲಿ ಭಾಗವಾಗಲು ಅವರು ಹೇಗೆ ಪ್ರೋತ್ಸಾಹಿಸುತ್ತಾರೆ ಎಂಬುದನ್ನು ತೋರಿಸಲು ಶಿಕ್ಷಣಾರ್ಥಿಯರೊಂದಿಗೆ ಅಭಿನಯಿಸಲು ಆಯೋಜಕರು ಪ್ರೋತ್ಸಾಹಿಸಿರಿ.

### ಚರ್ಚಿಸಬೇಕಾದ ಅಂಶಗಳು

ಸಮುದಾಯವನ್ನು ಒಳಗೊಳ್ಳುವ ಪ್ರಾಮುಖ್ಯತೆಯನ್ನು ಮತ್ತು ಶಿಕ್ಷಣಾರ್ಥಿಯರು ಸಮುದಾಯದೊಂದಿಗೆ ಬರಬಹುದಾದ ವಿವಿಧ ಸಮಸ್ಯೆಗಳನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ಆಯೋಜಕರು ಚರ್ಚಿಸಿರಿ. ಅವರು ವಿವಿಧ ಯಶಸ್ವಿನ ಕಥೆಗಳನ್ನು ನೋಡಲು ಸಮುದಾಯದವರನ್ನು ಪ್ರೋತ್ಸಾಹಿಸಬಹುದು ಮತ್ತು ಮೊದಲ ಹೆಜ್ಜೆಯಿಂದ ಪ್ರಾರಂಭಿಸುವ ಮೂಲಕ ಜನರು ಹೇಗೆ ದೊಡ್ಡ ಬದಲಾವಣೆಗಳನ್ನು ತರಲು ಸಮರ್ಥರಾಗಿದ್ದಾರೆ ಎಂದು ಚರ್ಚಿಸಿ.



### ಶಿಕ್ಷಣಾರ್ಥಿಯರಿಗೆ ಕಾರ್ಯಗಳು

- ಶಿಕ್ಷಣಾರ್ಥಿಯರು ಪಂಚಾಯತ್ ಸಭೆ ಅಥವಾ ಚರ್ಚಾ ವೇದಿಕೆಯ ಸಮಯದಲ್ಲಿ ಅವರ ಸಮುದಾಯದ ಸದಸ್ಯರೊಂದಿಗೆ ಅವರ ಯೋಜನೆಗಳನ್ನು ಹಂಚಿಕೊಳ್ಳಲಿ. ಅವರು ತಮ್ಮ ಯೋಜನೆಯಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಕಂಡುಹಿಡಿಯಬೇಕು ಮತ್ತು ಅವರು ಅದರ ಮೇಲೆ ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ಚರ್ಚಿಸಬೇಕು.
- ಶಿಕ್ಷಣಾರ್ಥಿಯರು ಅವರ ಕ್ರಿಯಾ ಯೋಜನೆಯಲ್ಲಿ ಕೆಲಸ ಮಾಡಲು ಸಹಾಯ ಮಾಡುವ ಜೀವನ ಕೌಶಲ್ಯಗಳ ಅವಧಿಯಲ್ಲಿ ಅವರು ಅಭಿವೃದ್ಧಿಪಡಿಸಿದ ಸಾಮರ್ಥ್ಯಗಳನ್ನು ಪಟ್ಟಿ ಮಾಡಲಿ.

ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ.)

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).

## ಪಾಠ 53

# ಸಮುದಾಯ ಸೇವಾ ಯೋಜನೆಯನ್ನು ಮುಕ್ತಾಯಗೊಳಿಸುವಿಕೆ




### ಪಾಠದ ಉದ್ದೇಶಗಳು

- ಶಿಕ್ಷಣಾರ್ಥಿಯರಿಗೆ ಸಮುದಾಯ ಸೇವಾ ಯೋಜನೆಯನ್ನು ಮುಕ್ತಾಯಗೊಳಿಸುವ ಪ್ರಕ್ರಿಯೆಯನ್ನು ಅರ್ಥಮಾಡಿಸುವುದು, ಮತ್ತು
- ಶಿಕ್ಷಣಾರ್ಥಿಯರ ವಿಮರ್ಶಾತ್ಮಕ ಚಿಂತನೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

**ಅವಧಿ: 70 ನಿಮಿಷಗಳು**

### ಸಮಯ ವಿಂಗಡಣೆ

| 25 ನಿಮಿಷಗಳು | 15 ನಿಮಿಷಗಳು | 20 ನಿಮಿಷಗಳು | 10 ನಿಮಿಷ |
|---|---|---|---|
| ಚಟುವಟಿಕೆ 1 | ಚಟುವಟಿಕೆ 1 ರ ಚರ್ಚೆ | ಚಟುವಟಿಕೆ 2 | ಚಟುವಟಿಕೆ 2 ರ ಚರ್ಚೆ |

### ತರಬೇತಿಗೆ ಬೇಕಾದ ಸಾಮಗ್ರಿಗಳು

ಕಪ್ಪು ಹಲಗೆ, ಸೀಮೆಸುಣ್ಣ, A4 ಕಾಗದದ ಹಾಳೆಗಳು, ಮತ್ತು ಬಣ್ಣದ ಪೆನ್ಸಿಲ್/ಸ್ಕೆಚ್ ಪೆನ್ನುಗಳು, ಚಾರ್ಟ್ ಪೇಪರ್, ಬೆಣಚುಕಲ್ಲುಗಳು, ಮರದ ಕೋಲುಗಳು, ಮರದ ತುಂಡುಗಳು, ದಾರ.



### ಪರಿಕಲ್ಪನ ಟಿಪ್ಪಣಿ

"ಪ್ರಾರಂಭಿಸುವ ಎಲ್ಲವೂ ಕೊನೆಗೊಳ್ಳಬೇಕು." ಇದು ಪ್ರಕೃತಿಯ ನಿಯಮವಾಗಿದೆ ಮತ್ತು ಇದು ನೈಸರ್ಗಿಕ ಹಾಗೂ ಮಾನವ ನಿರ್ಮಿತ ಪ್ರಪಂಚದ ಎಲ್ಲಾ ಅಂಶಗಳಿಗೆ ಅನ್ವಯಿಸುತ್ತದೆ. ಅಂತ್ಯವು ದುಃಖಕರವಾಗಿ ಇರಬೇಕಾಗಿಲ್ಲ, ಹೊಸದನ್ನು ಬದಲಾಯಿಸುವ ಹಾಗೂ ಹಳೆಯದನ್ನು ಬಿಟ್ಟುಬಿಡುವ ಸಾಮರ್ಥ್ಯವನ್ನು ಸಹ ಅರ್ಥೈಸಬಲ್ಲದು. ಹೀಗಾಗಿ, ನೀವು ಯೋಜನೆಯನ್ನು ಹೇಗೆ ಮುಂದಕ್ಕೆ ಮುಂದುವರಿಸಲು ಬಯಸುತ್ತೀರಿ, ಯೋಜನೆಯನ್ನು ಎಲ್ಲಿಗೆ ನಿಲ್ಲಿಸಿ ಮುಗಿಸುವಿರಿ ಹಾಗೂ ಯೋಜನೆಯನ್ನು ಸ್ವತಂತ್ರ ಮತ್ತು ಸ್ವಾವಲಂಬತನತೆ ಯಾವಾಗ ಮಾಡಲು ನೀವು ಬಯಸುವಿರಿ ಎಂಬುದರ ಕುರಿತು ಯೋಚಿಸುವುದು ಮುಖ್ಯವಾಗಿದೆ.

ಯೋಜನೆಯ ತೀರ್ಮಾನವು ಹಂತ ಹಂತವಾಗಿ ನಡೆಯುವುದು, ಅಲ್ಲಿವರೆಗೂ ನಾವು ಸಮುದಾಯವನ್ನು ಮುಂದಕ್ಕೆ ಕೊಂಡೊಯ್ಯಬಹುದು. ತಂಡದ ಸಂಚಾಲಕರು ನಿಧಾನವಾಗಿ ಅವರ ಜವಾಬ್ದಾರಿಗಳಿಂದ ತಮ್ಮನ್ನು ತಾವೇ ಬೇರ್ಪಡಿಸಿಕೊಂಡು ದೂರಸರಿಯುವುದು.

ಆಯೋಜಕರು, ಯೋಜನೆಯ ತೀರ್ಮಾನದ ಕುರಿತು ಯೋಚಿಸುವ ಪ್ರಾಮುಖ್ಯತೆಯನ್ನು ಶಿಕ್ಷಣಾರ್ಥಿಯರ ಗುಂಪಿಗೆ ಅರ್ಥಮಾಡಿಸಲು ಸಹಾಯಕವಾಗಿ ಈ ಕೆಳಗಿನ ಚಟುವಟಿಕೆಯನ್ನು ಮಾಡಿಸಿರಿ.

## ಚಟುವಟಿಕೆ 1




### ಉದ್ದೇಶಗಳು

- ಶಿಕ್ಷಣಾರ್ಥಿಯರಿಗೆ ಸಮುದಾಯ ಸೇವಾ ಯೋಜನೆಯ ತೀರ್ಮಾನದ ಪ್ರಾಮುಖ್ಯತೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿಸುವುದು, ಮತ್ತು
- ಶಿಕ್ಷಣಾರ್ಥಿಯರ ವಿಮರ್ಶಾತ್ಮಕ ಚಿಂತನೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು

### METHOD ವಿಧಾನ

ಆಯೋಜಕರು ಕೋಣೆಯ ಒಂದು ತುದಿಯಿಂದ ಇನ್ನೊಂದು ತುದಿಗೆ ಸೀಮೆಸುಣ್ಣ ಅಥವಾ ಬಟ್ಟೆಯ ಸಹಾಯದಿಂದ ನೆಲದ ಮೇಲೆ ಸಣ್ಣ ನದಿಯನ್ನು ಮಾಡಿರಿ. ಶಿಕ್ಷಣಾರ್ಥಿಯರನ್ನು ಗುಂಪುಗಳಾಗಿ ವಿಂಗಡಿಸಿ. ಪ್ರತಿಯೊಂದು ಗುಂಪನ್ನು ಮರದ ತುಂಡುಗಳು, ಬೆಣಚುಕಲ್ಲುಗಳು, ದಾರ ಮತ್ತು ಮರದ ಕೋಲಿನಿಂದ ಸೇತುವೆ ಮಾಡಲು ಹೇಳಿರಿ. ಗುಂಪುಗಳು ಇರುವ ವಸ್ತುಗಳೊಂದಿಗೆ ಸೇತುವೆಯನ್ನು ಮಾಡಲು ತಿಳಿಸಿ. ಶಿಕ್ಷಣಾರ್ಥಿಗಳು ಇರುವ ವಸ್ತುಗಳೊಂದಿಗೆ ಕೇವಲ ಒಂದು ವಸ್ತುವನ್ನು ಮಾತ್ರ ಬಳಸಬೇಕು. ಸೇತುವೆಯ ಮೇಲೆ ಕೆಲಸ ಮಾಡಲು ಎಲ್ಲಾ ಗುಂಪುಗಳಿಗೆ ಕೇವಲ 15 ನಿಮಿಷಗಳನ್ನು ನೀಡಿರಿ. ಗುಂಪುಗಳು ಅವರ ಸೇತುವೆಗಳು ಕಟ್ಟಿದ ಮೇಲೆ ಪ್ರಸ್ತುತಪಡಿಸಲಿ, ಆಯೋಜಕರು ಶಿಕ್ಷಣಾರ್ಥಿಯರಿಗೆ ವಿಮರ್ಶೆ ಪ್ರಶ್ನೆಗಳನ್ನು ಕೇಳಿರಿ.



### ಪ್ರಶ್ನೆಗಳು

- ಸೇತುವೆಯನ್ನು ಪ್ರಾರಂಭಿಸುವ ಮೊದಲು ನಿಮ್ಮ ಗುಂಪು ಏನು ಯೋಚಿಸಿತು?
- ಸೇತುವೆಯನ್ನು ವಿನ್ಯಾಸಗೊಳಿಸುವ ಮೊದಲು ನೀವು ಸೇತುವೆಯನ್ನು ಕಲ್ಪಿಸಿಕೊಂಡಿದ್ದೀರಾ?
- ಎಲ್ಲವೂ ನಿಮ್ಮ ಯೋಜನೆಯಂತೆ ನಡೆದಿದೆಯೇ ಅಥವಾ ನೀವು ಅದನ್ನು ನಡುವೆ ಬದಲಾಯಿಸಬೇಕೇ?
- ಸೇತುವೆ ಹೇಗೆ ಕಾಣುತ್ತದೆ ಎಂದು ಯೋಚಿಸುವುದು ಅಗತ್ಯವೇ?

### ಚರ್ಚಿಸಬೇಕಾದ ಅಂಶಗಳು

ಆಯೋಜಕರು ಈ ಸೇತುವೆಯಂತೆಯೇ ಶಿಕ್ಷಣಾರ್ಥಿಯರು ಅವರ ಸಮುದಾಯ ಸೇವಾ ಯೋಜನೆಯನ್ನು ಹೇಗೆ ಮುಕ್ತಾಯಗೊಳಿಸುತ್ತಾರೆ ಎಂಬುದನ್ನು ದೃಶ್ಯೀಕರಿಸರಿ ಎಂದು ಚರ್ಚಿಸಿರಿ. ನಾವು ತೀರ್ಮಾನದ ಬಗ್ಗೆ ಯೋಚಿಸುತ್ತಿರುವಾಗ ಕಾಳಜಿ ವಹಿಸಬೇಕಾದ ವಿವಿಧ ಸಮಸ್ಯೆಗಳ ಬಗ್ಗೆ ಹಾಗೂ ಅದರ ಬಗ್ಗೆ ಮುಂಚಿತವಾಗಿ ಯೋಚಿಸುವುದು ಹೇಗೆ ಮುಖ್ಯ ಎಂದು ಶಿಕ್ಷಣಾರ್ಥಿಯು ಬುದ್ಧಿಮಂಥನ ಮಾಡಬಹುದು.

## ಚಟುವಟಿಕೆ 2




### ಉದ್ದೇಶಗಳು

- ಶಿಕ್ಷಣಾರ್ಥಿಯರಿಗೆ ಸಮುದಾಯ ಸೇವಾ ಯೋಜನೆಯನ್ನು ಮುಕ್ತಾಯಗೊಳಿಸುವ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವುದು, ಮತ್ತು
- ಶಿಕ್ಷಣಾರ್ಥಿಯರ ವಿಮರ್ಶಾತ್ಮಕ ಚಿಂತನೆಯ ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು

METHOD

### ವಿಧಾನ

ಆಯೋಜಕರು ಶಿಕ್ಷಣಾರ್ಥಿಯರು ಕಳೆದ ತರಗತಿಯಲ್ಲಿ ಯೋಜನೆಯನ್ನು ತೋರಿಸಲು ವಿನ್ಯಾಸಗೊಳಿಸಿದ ಅವರ ಯೋಜನೆಯ ಚಿತ್ರ ಕಾರ್ಡ್‌ಗಳನ್ನು ನೋಡಲು ಶಿಕ್ಷಣಾರ್ಥಿಯರನ್ನು ಹೇಳಿರಿ. ಕೊನೆಯ ಕಾರ್ಡ್ ಅನ್ನು ನೋಡುವಾಗ ಯೋಜನೆಯನ್ನು ಮುಕ್ತಾಯಗೊಳಿಸುವ ಬಗ್ಗೆ ಅವರು ಹೇಗೆ ಯೋಚಿಸಿದ್ದಾರೆಂದು ಯೋಚಿಸಲು ಶಿಕ್ಷಣಾರ್ಥಿಯರನ್ನು ಕೇಳಿರಿ, ಕೊನೆಯ ಚಟುವಟಿಕೆಯಲ್ಲಿ ಸಂಪೂರ್ಣ ಸೇತುವೆಯಂತೆಯೇ, ಯೋಜನೆಯನ್ನು ಮುಕ್ತಾಯಗೊಳಿಸುವಾಗ ಅವರು ಪರಿಗಣಿಸಬೇಕಾದ ಈ ಕೆಳಗಿನ ಅಂಶಗಳ ಬಗ್ಗೆ ಅವರ ಅಭಿಪ್ರಾಯಗಳನ್ನು ಚರ್ಚಿಸಲು ಆಯೋಜಕರು ಶಿಕ್ಷಣಾರ್ಥಿಯರನ್ನು ಪ್ರೋತ್ಸಾಹಿಸಿರಿ.

ನೀವು ಸಾಧಿಸಲು ಬಯಸಿದ ಪರಿಣಾಮವನ್ನು ಮಾಡಿರುವಿರಾ?

ಎಷ್ಟು ಜನರು ಪ್ರಭಾವಿತರಾಗಿದ್ದಾರೆರೇ? (ದಯವಿಟ್ಟು ಪರಿಮಾಣಾತ್ಮಕ ಮತ್ತು ಗುಣಾತ್ಮಕ ಮಾಹಿತಿಯನ್ನು ಒದಗಿಸಲು ಪ್ರಯತ್ನಿಸಿ)

ನೀವು ಬಯಸಿದ ಗುರಿಯನ್ನು ಸಾಧಿಸಿದ್ದೀರಾ?

ಯೋಜನೆಯನ್ನು ಹೇಗೆ ಮುಕ್ತಾಯಗೊಳಿಸಲು ಬಯಸುವಿರಿ?

ನೀವು ಯೋಜನೆಯನ್ನು ಮುಗಿಸಲು ಅಥವಾ ಮುಂದಿನ ಹಂತಕ್ಕೆ ತೆಗೆದುಕೊಳ್ಳಲು ಬಯಸುತ್ತೀರಾ?

ಸದಸ್ಯರು ಯಾವಾಗ ತೀರ್ಮಾನಿಸಬೇಕು?

ಸದಸ್ಯರು ಯೋಜನೆಯಿಂದ ಹೊರಗುಳಿಯಬೇಕೇ ಮತ್ತು ಸಮುದಾಯವು ಅದನ್ನು ಮತ್ತಷ್ಟು ಮುಂದುವರಿಯಲು ಬಿಡಬೇಕೇ?

ಯೋಜನೆಯನ್ನು ಸ್ವಾವಲಂಬಿಯಾಗಿಸುವ ನಿಟ್ಟಿನಲ್ಲಿ ಸದಸ್ಯರು ಕೆಲಸ ಮಾಡುತ್ತಿದ್ದಾರೆಯೇ?

ಸದಸ್ಯರು ಅವರ ಸಮುದಾಯದವರಿಗೆ ಸ್ವತಂತ್ರವಾಗಿ ಕೆಲಸ ಮಾಡಲು ಸಾಕಷ್ಟು ತರಬೇತಿ ನೀಡಿದ್ದಾರೆಯೇ?

ಯೋಜನೆಯಿಂದ ಹೊರಬರಲು ಸದಸ್ಯರು ನಿಯಮಿತವಾಗಿ ಕೆಲಸ ಮಾಡುತ್ತಿದ್ದಾರೆಯೇ?

ಯೋಜನೆಯನ್ನು ನಿರಂತರವಾಗಿ ಹೇಗೆ ಮೇಲ್ವಿಚಾರಣೆ ಮಾಡಲಾಗುತ್ತದೆ ಮತ್ತು ಮೌಲ್ಯಮಾಪನ ಮಾಡಲಾಗುತ್ತದೆ?

ಸದಸ್ಯರು ಸಮುದಾಯದವರಿಗೆ ಪ್ರಮುಖ ಜವಾಬ್ದಾರಿಗಳನ್ನು ನೀಡಿದ್ದಾರೆಯೇ?

ಶಿಕ್ಷಣಾರ್ಥಿಯು ಈ ಪ್ರಶ್ನೆಗಳಿಗೆ ಉತ್ತರಗಳ ಬಗ್ಗೆ ಯೋಚಿಸಲು ಆಯೋಜಕರು ಪ್ರೋತ್ಸಾಹಿಸಿರಿ ಮತ್ತು ಅವರು ಸರಿಯಾದ ದಿಕ್ಕಿನಲ್ಲಿ ಯೋಚಿಸುತ್ತಿರುವರೇ ಎಂದು ವೀಕ್ಷಿಸಲು ಅವರ ಯೋಜನೆಯ ನಿಯಮಿತ ಮೌಲ್ಯಮಾಪನವನ್ನು ಮಾಡಿರಿ. ಯೋಜನೆಯ ಕೊನೆಯ ಹಂತವನ್ನು ಚಿತ್ರಾತ್ಮಕವಾಗಿ ಪ್ರಸ್ತುತಪಡಿಸಲು ಶಿಕ್ಷಣಾರ್ಥಿಯರನ್ನು ಕೇಳಿರಿ.

## ಚರ್ಚಿಸಬೇಕಾದ ಅಂಶಗಳು: ಆಯೋಜಕರು

- ನಾವು ಯೋಜನೆಯನ್ನು ಮುಕ್ತಾಯಗೊಳಿಸುವ ಅಥವಾ ವಿನ್ಯಾಸಗೊಳಿಸಿದ ಯೋಜನೆಯನ್ನು ಸಾಕಾರಗೊಳಿಸುವ ಮೊದಲು ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳು ಏಕೆ ಮುಖ್ಯವೆಂದು ಚರ್ಚಿಸಿರಿ. ಯಾವುದೇ ಯೋಜನೆಯ ಗುರಿಯು ಗುಂಪನ್ನು ಸ್ವಾವಲಂಬಿಯಾಗಿ ಮತ್ತು ಸಶಕ್ತರನ್ನಾಗಿ ಮಾಡುವುದು, ಅವರು ತಮ್ಮದೇ ಆದ ಯೋಜನೆಗಳನ್ನು ವಿನ್ಯಾಸಗೊಳಿಸಲು ಮತ್ತು ಅವರ ಗ್ರಾಮ ಹಾಗೂ ಅದರ ಜನರ ಅಭಿವೃದ್ಧಿಗೆ ಕೆಲಸ ಮಾಡಲಿ.

- ಅವರು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದಾರೆಯೇ ಹಾಗೂ ಮುಂದಿನ ಕ್ರಮವನ್ನು ನಿರ್ಧರಿಸಲು ಸಾಧ್ಯವಾಗುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಲು ಅವರ ಪ್ರಗತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಮತ್ತು ಮೌಲ್ಯಮಾಪನ ಮಾಡಲು ಶಿಕ್ಷಣಾರ್ಥಿ ಗುಂಪನ್ನು ಪ್ರೋತ್ಸಾಹಿಸಿರಿ.

- ಸಮುದಾಯವು ಸಮಸ್ಯೆಯಿಂದ ಹೊರಬರಲು ಸಾಧ್ಯವಾದಾಗ ಮತ್ತು ನಂತರ ಸ್ವತಂತ್ರವಾಗಿ ಇದೇ ರೀತಿಯ ಸಮಸ್ಯೆಯನ್ನು ಎದುರಿಸಲು ಸಶಕ್ತತೆಯನ್ನು ಅನುಭವಿಸಿದಾಗ ಯೋಜನೆಯ ಸೌಂದರ್ಯವು ಹೇಗೆ ಇರುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಶಿಕ್ಷಣಾರ್ಥಿ ಗುಂಪಿಗೆ ಸಹಾಯ ಮಾಡಿರಿ.




### ಶಿಕ್ಷಣಾರ್ಥಿಯರಿಗೆ ಕಾರ್ಯಗಳು

ಶಿಕ್ಷಣಾರ್ಥಿಯರು ಅವರ ಹಳ್ಳಿಗಳಲ್ಲಿ ಹಿಂದೆ ನಡೆಸಿದ ಯೋಜನೆಗಳು ಮತ್ತು ಈಗ ಅದರ ಸ್ಥಿತಿ ಏನಾಗಿದೆ, ಅವು ಈಗ ಸ್ಥಗಿತಗೊಂಡಿವೆಯೇ ಅಥವಾ ಇನ್ನೂ ಚಾಲ್ತಿಯಲ್ಲಿವೆಯೇ ಎಂದು ಕಂಡುಹಿಡಿಯಿರಿ. ಅವರ ಯೋಜನೆಯ ತೀರ್ಮಾನಕ್ಕೆ ಕಾರಣಗಳನ್ನು ಕಂಡುಹಿಡಿಯಿರಿ ಮತ್ತು ಅದರ ಬಗ್ಗೆ ಏಕೆ ಹೋದರು ಎಂಬ ಮಾಹಿತಿಯನ್ನು ಸಂಗ್ರಹಿಸಿರಿ ಹಾಗೂ ಶಿಕ್ಷಣಾರ್ಥಿಯ ಗುಂಪಿನೊಂದಿಗೆ ಬಂದು ಹಂಚಿಕೊಳ್ಳಿರಿ.

ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ.)

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).

# ಪಾಠ 54

## ಪ್ರಕೃತಿಯೊಂದಿಗೆ ಜೀವನ

### ಪಾಠದ ಉದ್ದೇಶಗಳು

- ಹದಿಹರೆಯದವರು ಮತ್ತು ಯುವಕರನ್ನು ಪರಿಸರ ಮತ್ತು ಪರಿಸರ ಸಮಸ್ಯೆಗಳ ಬಗ್ಗೆ ಸಂವೇದನಾಶೀಲರನ್ನಾಗಿಮಾಡುವುದು,
- ಹದಿಹರೆಯದವರು ಮತ್ತು ಯುವಕರಲ್ಲಿ ಪರಿಸರವನ್ನು ಹೇಗೆ ರಕ್ಷಿಸಬೇಕು ಎಂಬುದರ ಕುರಿತು ಜಾಗೃತಿ ಮೂಡಿಸುವುದು ಮತ್ತು
- ಹದಿಹರೆಯದವರನ್ನು ಪರಿಸರ ಸಂರಕ್ಷಣೆಯ ಬಗ್ಗೆ ಇತರರನ್ನು ಪ್ರೇರೇಪಿಸಲು ಮತ್ತು ಸಮುದಾಯದ ಜನರಲ್ಲಿ ಜಾಗೃತಿ ಮೂಡಿಸಲು ಪ್ರೋತ್ಸಾಹಿಸಿರಿ.

**ಅವಧಿ: 85 ನಿಮಿಷಗಳು**

### ಸಮಯ ವಿಂಗಡಣೆ

| 40 ನಿಮಿಷಗಳು | 15 ನಿಮಿಷಗಳು | 20 ನಿಮಿಷಗಳು | 15 ನಿಮಿಷಗಳು |
|---|---|---|---|
| ಚಟುವಟಿಕೆ 1 | ಚಟುವಟಿಕೆ 1 ರ ಚರ್ಚೆ | ಚಟುವಟಿಕೆ 2 | ಚಟುವಟಿಕೆ 2 ರ ಚರ್ಚೆ |

### ತರಬೇತಿಗೆ ಬೇಕಾದ ಸಾಮಗ್ರಿಗಳು

ಕಪ್ಪು ಹಲಗೆ, ಸೀಮೆಸುಣ್ಣ, A4 ಕಾಗದದ ಹಾಳೆಗಳು ಮತ್ತು ಬಣ್ಣದ ಪೆನ್ಸಿಲ್‌ಗಳು/ಸ್ಕೆಚ್ ಪೆನ್ನುಗಳು, ಪತ್ರಿಕೆ, ಫೆವಿಕಾಲ್ ಅಥವಾ ಗಮ್

### ಪರಿಕಲ್ಪನ ಟಿಪ್ಪಣಿ

ನಮ್ಮಲ್ಲಿ ಹೆಚ್ಚಿನವರು ಇತ್ತೀಚಿನ ದಿನಗಳಲ್ಲಿ ಸುತ್ತಲೂ ಪರಿಸರದಲ್ಲಿ ಬದಲಾವಣೆಗಳನ್ನು ಗಮನಿಸಿದ್ದೇವೆ. ನಾವು ಸಮುದಾಯದ ಹಿರಿಯರೊಂದಿಗೆ ಮಾತನಾಡುವಾಗ, ಹವಾಮಾನವು ಹಿಂದೆಂದಿಗಿಂತಲೂ ಹೆಚ್ಚು ಬಿಸಿಯಾಗಿದೆ ಮತ್ತು ಇತ್ತೀಚಿನ ದಿನಗಳಲ್ಲಿ ಹವಾಮಾನವನ್ನು ಊಹಿಸಲು ತುಂಬಾ ಕಷ್ಟಕರವಾಗುತ್ತಿದೆ ಎಂದು ಎಲ್ಲರೂ ಹೇಳುವರು.

ಭೂಮಿಯ ಶಾಖ ಏರುತ್ತಿದೆ, ಏಕೆಂದರೆ ನಾವು ಮುಖ್ಯವಾಗಿ ಪಳೆಯುಳಿಕೆ ಇಂಧನಗಳನ್ನು ಸುಡುವ ಮೂಲಕ ವಾತಾವರಣಕ್ಕೆ ಇಂಗಾಲದ ಡೈಆಕ್ಸೈಡ್‌ನಂತಹ ಶಾಖ–ಬಲೆ (heat trapping) ಅನಿಲಗಳನ್ನು ಸೇರಿಸುತ್ತಿದ್ದೇವೆ. ಈ ಅನಿಲಗಳನ್ನು ಹಸಿರುಮನೆ ಅನಿಲಗಳು (greenhouse gases) ಎಂದು ಕರೆಯುತ್ತೇವೆ. ಉಷ್ಣದ ತಾಪಮಾನವು ಪ್ರಪಂಚದಾದ್ಯಂತ ಇತರ ಬದಲಾವಣೆಗಳನ್ನು ಉಂಟುಮಾಡುತ್ತದೆ. ಈ ಬದಲಾವಣೆಗಳು ಜನರ, ಪ್ರಾಣಿಗಳ ಮತ್ತು ಪರಿಸರ ವ್ಯವಸ್ಥೆಗಳ ಮೇಲೆ ಹಲವು ವಿಧಗಳಲ್ಲಿ ಪರಿಣಾಮ ಬೀರುತ್ತವೆ. ಕಡಿಮೆ ಮಳೆಯು ಕೆಲವು ಸ್ಥಳಗಳಿಗೆ ಕಡಿಮೆ ನೀರು ಎಂದರ್ಥ, ಆದರೆ ಹೆಚ್ಚಿನ ಮಳೆಯು ಭೀಕರ ಪ್ರವಾಹವನ್ನು ಉಂಟುಮಾಡಬಹುದು. ಹೆಚ್ಚು ಶಾಖದ ದಿನಗಳು ಬೆಳೆಗಳನ್ನು ಒಣಗಿಸಬಹುದು ಮತ್ತು ಜನರು ಹಾಗೂ ಪ್ರಾಣಿಗಳಿಗೆ ಅನಾರೋಗ್ಯವನ್ನು ಉಂಟುಮಾಡಬಹುದು. ಕೆಲವು ಸ್ಥಳಗಳಲ್ಲಿ, ಜನರು ಬದಲಾಗುತ್ತಿರುವ ಪರಿಸರವನ್ನು ನಿಭಾಯಿಸಲು ಹೆಣಗಾಡುತ್ತಿರುವರು.

ಹವಾಮಾನ ಬದಲಾವಣೆಯ ಕುರಿತಾದ ಪ್ರಮುಖ ಸಮಾವೇಶಗಳು ಪ್ರಪಂಚದಾದ್ಯಂತ ನಡೆಯುತ್ತಿವೆ ಮತ್ತು ವಿವಿಧ ದೇಶಗಳು ಪರಿಸರವನ್ನು ರಕ್ಷಿಸಲು ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಪ್ರತಿಯೊಬ್ಬ ವ್ಯಕ್ತಿಯು ಪರಿಸರವನ್ನು ರಕ್ಷಿಸಲು ಪ್ರಯತ್ನಿಸಿದರೆ ಮಾತ್ರ ಈ ಎಲ್ಲಾ ಕ್ರಮಗಳು ಪರಿಣಾಮಕಾರಿಯಾಗಿರುತ್ತದೆ.

ಆಯೋಜಕರು ನೀರು, ಗಾಳಿ, ಮಣ್ಣಿನಂತಹ ವಿವಿಧ ರೀತಿಯ ಮಾಲಿನ್ಯವನ್ನು ಚರ್ಚಿಸಿರಿ. ಮಣ್ಣಿನಲ್ಲಿ ಪಾಲಿಥೀನ್‌ಗಳು ಅಥವಾ ಕೀಟನಾಶಕಗಳನ್ನು ಬಳಸುವುದರ ಮೂಲಕ ನಾವು ಪರಿಸರವನ್ನು ಹೇಗೆ ಮಾಲಿನ್ಯಗೊಳಿಸುತ್ತೇವೆ ಮತ್ತು ಅವು ಪರಿಸರದಲ್ಲಿ ಹೇಗೆ ಮಾಲಿನ್ಯಕಾರಕಗಳಾಗಿ ಕಾರ್ಯನಿರ್ವಹಿಸುತ್ತವೆ ಮತ್ತು ಮಣ್ಣಿಗೆ ಹಾನಿಯನ್ನುಂಟುಮಾಡುತ್ತವೆ ಎಂಬುದರ ಕುರಿತು ಆಯೋಜಕರು ಮಾತನಾಡಿರಿ. ಪರಿಸರದ ಸಮತೋಲನವನ್ನು ಕದಡುವ ಯಾವುದಾದರೂ ಮಾಲಿನ್ಯಕಾರಕವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಆಯೋಜಕರು ಶಿಕ್ಷಣಾರ್ಥಿಯರಿಗೆ ಹೇಳಿರಿ.

## ಚಟುವಟಿಕೆ 1 ಐಸ್ ಬ್ರೇಕರ್



### ಉದ್ದೇಶಗಳು

- ಹದಿಹರೆಯದವರು ಮತ್ತು ಯುವಕರನ್ನು ಪರಿಸರ ಮತ್ತು ಪರಿಸರ ಸಮಸ್ಯೆಗಳ ಬಗ್ಗೆ ಸಂವೇದನಾಶೀಲರನ್ನಾಗಿ ಮಾಡುವುದು, ಮತ್ತು
- ಹದಿಹರೆಯದವರು ಮತ್ತು ಯುವಜನರಿಗೆ ಪರಿಸರದಲ್ಲಿನ ಬದಲಾವಣೆಗಳ ಬಗ್ಗೆ ಅರಿವು ಮೂಡಿಸುವುದು.

### METHOD ವಿಧಾನ



ಭೂಮಿ ತಾಯಿ ಎಷ್ಟು ಸುಂದರವಾಗಿದೆ, ಅದು ನಮಗೆ ಎಲ್ಲವನ್ನೂ ಹೇಗೆ ಒದಗಿಸುವುದು – ಆಹಾರದಿಂದ ಆಶ್ರಯದಿಂದ ಬಟ್ಟೆಯವರೆಗೆ, ನಮ್ಮಲ್ಲಿರುವ ಎಲ್ಲವೂ ಭೂಮಿ ಅಥವಾ ಪ್ರಕೃತಿಯ ಕೊಡುಗೆಯಾಗಿದೆ ಎಂಬುದರ ಕುರಿತು ಆಯೋಜಕರು ಗುಂಪಿನೊಂದಿಗೆ ಮಾತನಾಡಿರಿ.

ನೈಸರ್ಗಿಕ ಉತ್ಪನ್ನಗಳಿಂದ ತಯಾರಿಸಲಾದ ವಸ್ತುಗಳ ಪಟ್ಟಿಯನ್ನು ಮಾಡಲು ಆಯೋಜಕರು ಶಿಕ್ಷಣಾರ್ಥಿಯರ ಗುಂಪಿಗೆ ಕೇಳಿರಿ ಮತ್ತು ಅವು ಹೇಗೆ ಉಪಯುಕ್ತವಾಗಿವೆ ಹಾಗೂ ಮನುಷ್ಯರಿಗೆ ಇದರಿಂದ ಯಾವುದೇ ಹಾನಿ ಆಗುವುದಿಲ್ಲ, ಬದಲಿಗೆ ಅವು ಮಾನವ ಸ್ನೇಹಿ. ಪ್ರಕೃತಿಯ ಇತರ ಪ್ರಯೋಜನಗಳನ್ನು ಸಹ ಚರ್ಚಿಸಿರಿ. ಈ ಚಟುವಟಿಕೆಯು ಮೂರು ಹಂತಗಳನ್ನು ಹೊಂದಿದೆ ಎಂದು ಆಯೋಜಕರು ಗುಂಪಿಗೆ ಹೇಳಿರಿ.

**ಹಂತ 1–** ಆಯೋಜಕರು ಶಿಕ್ಷಣಾರ್ಥಿ ಗುಂಪುಗಳನ್ನು 5 ಜನರ ಸಣ್ಣ ಗುಂಪುಗಳಾಗಿ ವಿಂಗಡಿಸಿರಿ, ಪ್ರತಿ ಗುಂಪನ್ನು ವೃತ್ತಪತ್ರಿಕೆ, ಗಮ್ ಮತ್ತು ಬಣ್ಣಗಳ ಸಹಾಯದಿಂದ ಭೂಮಿಯ ಮಾದರಿಯನ್ನು ಮಾಡಲು ಹೇಳಿರಿ. ಶಿಕ್ಷಣಾರ್ಥಿಯರ ಕೈಗೆ ಸುಲಭವಾಗಿ ಜೇಡಿಮಣ್ಣು ಅಥವಾ ಮಣ್ಣು/ನೀರು ಸಿಗುವುದಿದ್ದರೆ ಅದನ್ನು ಉಪಯೋಗಿಸಿಕೊಳ್ಳಲು ಹೇಳಿ. ಗುಂಪಿನ ಸದಸ್ಯರು ಸುಂದರವಾದ ಭೂಮಿಯನ್ನು ಅವರು ಅನುಭವಿಸುವ ರೀತಿಯಲ್ಲಿ ಮಾದರಿಯನ್ನು ವಿನ್ಯಾಸಗೊಳಿಸಲು ಹೇಳಿರಿ. ಈ ಚಟುವಟಿಕೆಯನ್ನು ಮಾಡಲು ಗುಂಪಿಗೆ ಸುಮಾರು 20 ನಿಮಿಷಗಳನ್ನು ನೀಡಿರಿ. ಪ್ರತಿಯೊಂದು ಗುಂಪೂ ಬಂದು ಅವರ ಮಾದರಿ ಭೂಮಿಯನ್ನು ಇತರ ಗುಂಪುಗಳಿಗೆ ಪ್ರಸ್ತುತಪಡಿಸಲು ಮತ್ತು ಅದರ ಬಗ್ಗೆ 2–3 ನಿಮಿಷಗಳ ಕಾಲ ಮಾತನಾಡಲು ಹೇಳಿರಿ, ಶಿಕ್ಷಣಾರ್ಥಿಗಳು ಹೇಗೆ ವಿನ್ಯಾಸಗೊಳಿಸಿದರು ಮತ್ತು ಏಕೆ ವಿನ್ಯಾಸಗೊಳಿಸಿದರು ಎಂದು ಹೇಳಲು ಕೇಳಿರಿ. ನಂತರ ಮುಂದಿನ ಹಂತಕ್ಕೆ ಹೋಗಲಿ.

**ಹಂತ 2 –** ಆಯೋಜಕರು ಗುಂಪುಗಳನ್ನು ಕೇಳಿರಿ, "ನಿಮ್ಮ ಭೂಮಿಯ ಮಾದರಿಯನ್ನು ಹಾನಿ ಮಾಡಲು ಅಥವಾ ಬೇರೆ ಬೇರೆ ಸ್ಥಳಗಳಿಂದ ಅದನ್ನು ಮುರಿಯಲು ನಾನು ಹೇಳಿದರೆ, ನೀವು ಅದನ್ನು ಮಾಡಲು ಸಾಧ್ಯವಾಗುತ್ತದೆಯೇ? ನೀವು ಹೇಗೆ ಭಾವಿಸುತ್ತೀರಿ? ಯಾರು ಅದನ್ನು ಸುಲಭವಾಗಿ ಹಾನಿಗೊಳಿಸಬಹುದು? ಏಕೆ? ಇದೇ ರೀತಿಯ ಪ್ರಶ್ನೆಗಳನ್ನು ಗುಂಪಿನೊಂದಿಗೆ ಚರ್ಚಿಸಿರಿ.

**ಹಂತ 3 –** ಈಗ, ಪ್ರತಿ ಗುಂಪಿಗೆ ಅವರ ಭೂಮಿಯ ಮಾದರಿಯನ್ನು ಮತ್ತೊಂದು ಗುಂಪಿಗೆ ಹಸ್ತಾಂತರಿಸಲು ಹೇಳಿರಿ. ಗುಂಪಿಗೆ 2ನೇ ಹಂತದ ಪ್ರಶ್ನೆಗಳಿಗೆ ಸಮಾನವಾದ ಪ್ರಶ್ನೆಗಳನ್ನು ಕೇಳಿರಿ, ಅಂದರೆ ಅವರು ಈಗ ಹೊಂದಿರುವ ಮಾದರಿಯನ್ನು ನಾಶಮಾಡಲು ಕೇಳಿದರೆ; ಅವರು ಅದನ್ನು ನಾಶಮಾಡಲು ಸಾಧ್ಯವಾಗುತ್ತದೆಯೇ? ತಾವು ಸಿದ್ಧಪಡಿಸಿದ ಮಾದರಿಯನ್ನು ನಾಶಪಡಿಸುವುದಕ್ಕಿಂತ ಸುಲಭವಾಗುತ್ತದೆಯೇ? ಏಕೆ? ಎಂದು ಚರ್ಚಿಸಿರಿ

### ಚರ್ಚಿಸಬೇಕಾದ ಅಂಶಗಳು

- ಆಯೋಜಕರು ಪ್ರತಿ ಹಂತದ ತೊಂದರೆಯ ಮಟ್ಟವನ್ನು ಕುರಿತು ಚರ್ಚಿಸಿರಿ. ಭೂಮಿ ಮಾದರಿಯನ್ನು ತಯಾರಿಸಲು ಪ್ರತಿಯೊಬ್ಬರೂ ಹೇಗೆ ಕೊಡುಗೆ ನೀಡಬೇಕೆಂದು ಆಯೋಜಕರು ಸೂಚಿಸಿರಿ. ನಾವು ನಿಜ ಜೀವನವನ್ನು ನೋಡಿದರೆ, ನಾವೆಲ್ಲರೂ ಮೊದಲನೆ ಹಂತದ ಮೂಲಕ ಹೋಗಿಲ್ಲ, ಆದ್ದರಿಂದ ಭೂಮಿಯಂತಹ ಅದ್ಭುತವಾದದ್ದನ್ನು ರಚಿಸಲು ನಾವು ಮಾಡುವ ಪ್ರಯತ್ನವನ್ನು ಅರ್ಥಮಾಡಿಕೊಳ್ಳುವುದಿಲ್ಲ ಎಂದು ಸೂಚಿಸಿರಿ. ಗುಂಪು ಪಟ್ಟಿ ಮಾಡಿರುವ ಪ್ರಯೋಜನಗಳನ್ನು ಹಾಗೂ ಗುಂಪು ಹೇಳಿರುವ ವಿವಿಧ ಉತ್ಪನ್ನಗಳನ್ನು ಪ್ರಕೃತಿಯಿಂದ ತಯಾರಿಸಲಾಗಿದೆ ಎಂದು ಸೂಚಿಸಿರಿ.
- ಆಯೋಜಕರು ಎರಡನೇಯ ಹಂತದಲ್ಲಿ ಕೆಲವರು ಭೂಮಿ ಮಾದರಿಯನ್ನು ನಾಶಮಾಡಲು ಹೇಗೆಂದು ಸುಲಭವಾಗಿ ಕಂಡುಕೊಂಡರಿ, ಆದರೆ ನಿಮ್ಮಲ್ಲಿ ಹೆಚ್ಚಿನವರು ಭೂಮಿ ಮಾದರಿಗೆ ಯಾವುದೇ ಹಾನಿಯನ್ನುಂಟುಮಾಡುವುದು ಕಷ್ಟಕರವೆಂದು ಕಂಡುಕೊಂಡರಿ.

ಕಾರಣ ನೀವು ಆ ಮಾದರಿಯನ್ನು ಮಾಡಲು ಪ್ರಯತ್ನ ಪಟ್ಟಿದ್ದೀರಿ ಅಥವಾ ನಿಮ್ಮ ಪ್ರಯತ್ನವು ಕಡಿಮೆಯಿದ್ದರೆ ಅದನ್ನು ಮುರಿಯಲು ಹಿತವೆನಿಸುತ್ತಿತ್ತು. ನೀವು ಭೂಮಿಯನ್ನು ನಿಮ್ಮದೇ ಎಂದು ಪರಿಗಣಿಸಿದಾಗ ಅದನ್ನು ನೋಡಿಕೊಳ್ಳಲು ಕೆಲಸ ಮಾಡುತ್ತೀರಿ ಆದರೆ ಅದನ್ನು ನಿಮಗೆ ನೀಡಲಾದ ಚಟುವಟಿಕೆಯೆಂದು ನೋಡಿದಾಗ, ನಾಶಮಾಡಲು ನೀವು ತಲೆಕೆಡಿಸಿಕೊಳ್ಳುವುದಿಲ್ಲ, ಮೂರನೇ ಹಂತದಂತೆ. ಕೆಲವು ಗುಂಪುಗಳು ಅದನ್ನು ಮುರಿಯಲು ಸುಲಭವಾಗಿ ಒಪ್ಪಬಹುದು. ಇದು ನಮ್ಮ ಹಿಂದಿನ ಪೀಳಿಗೆಯಿಂದ ನಮಗೆ ನೀಡಲ್ಪಟ್ಟಿದೆ ಮತ್ತು ನಾವು ಇದನ್ನು ಉಡುಗೊರೆಯಾಗಿ ಗ್ರಹಿಸುವುದಿಲ್ಲ, ಲಘುವಾಗಿ ತೆಗೆದುಕೊಳ್ಳುತ್ತೇವೆ.

- ಆಯೋಜಕರು ಶಿಕ್ಷಣಾರ್ಥಿಯರಲ್ಲಿ ನೈತಿಕತೆಯ ಬದಲು ವರ್ತನೆ ಮತ್ತು ನಡವಳಿಕೆಯ ಬದಲಾವಣೆಯನ್ನು ತರಲು ಪ್ರಯತ್ನಿಸಿರಿ. ಹೀಗಾಗಿ, ಶಿಕ್ಷಣಾರ್ಥಿಗಳು ಅವರ ಸುತ್ತಲಿನ ಪರಿಸರವನ್ನು ಹೇಗೆ ಕಾಳಜಿ ವಹಿಸಿವರು, ಅದು ವೈಯಕ್ತಿಕ ಮಟ್ಟದಲ್ಲಿ ಅದು ಹೇಗೆ ಸಹಾಯ ಮಾಡುವವು, ಉದಾಹರಣೆಗೆ ನೀರನ್ನು ಉಳಿಸುವುದು ಹಾಗೂ ನೀರಿನ ಮೂಲಗಳನ್ನು ರಕ್ಷಿಸುವುದು ಅದು ಈಗ ಮತ್ತು ಭವಿಷ್ಯದಲ್ಲಿ ಹೇಗೆ ಸಹಾಯ ಮಾಡುತ್ತದೆ ಎಂಬುದರ ಕುರಿತು ಚರ್ಚಿಸಿರಿ.

- ಆಯೋಜಕರು ನೈತಿಕತೆಯ ಆಧಾರದ ಮೇಲೆ ಕೇಂದ್ರೀಕರಿಸಬಾರದು ಬದಲಿಗೆ ಪ್ರಾಯೋಗಿಕ ಅಂಶಗಳ ಮೇಲೆ ಕೇಂದ್ರೀಕರಿಸಬೇಕು.

- ಶಿಕ್ಷಣಾರ್ಥಿಯರು ಭೂಮಿಯ ಮೇಲೆ ಶಾಂತಿಯುತವಾಗಿ ಮತ್ತು ಸಂತೋಷದಿಂದ ಬದುಕಲು ಬಯಸಿದರೆ, ಅವರ ದೃಷ್ಟಿಯನ್ನು ಹೇಗೆ ವಿಸ್ತರಿಸಕೊಳ್ಳಬೇಕು ಹಾಗೂ ಅವರ ಸಣ್ಣ ತುಂಡು ಜಾಗ ಅಥವಾ ಮನೆ ಅಥವಾ ವಸ್ತುಗಳನ್ನು ಮೀರಿ ಹೇಗೆ ನೋಡಬೇಕು ಎಂಬುದನ್ನು ಆಯೋಜಕರು ಗುಂಪಿನೊಂದಿಗೆ ಚರ್ಚಿಸಿರಿ. ಮಂಜುಗಡ್ಡೆಗಳು ಕರಗಿ ಸುನಾಮಿ, ಭೂಕಂಪಗಳು, ಪ್ರವಾಹಗಳು ಮುಂತಾದ ಹೆಚ್ಚು ನೈಸರ್ಗಿಕ ವಿಕೋಪಗಳಿಗೆ ಕಾರಣವಾಗುವುದರಿಂದ ಭೂಮಿಯ ಉಷ್ಣತೆಯು ಹೇಗೆ ಏರುತ್ತಿದೆ ಎಂದು ಆಯೋಜಕರು ತಿಳಿಸಿರಿ.

- ಆಯೋಜಕರು ಹಳ್ಳಿಯ ಜನರು ಎದುರಿಸುತ್ತಿರುವ ಸಾಮಾನ್ಯ ಪರಿಸರ ಸಮಸ್ಯೆಗಳನ್ನು ಹೇಳಿರಿ, ಉದಾಹರಣೆಗೆ ಜನರು ಪ್ರವಾಹದ ಭಯವನ್ನು ಹೊಂದಿದ್ದರೆ ಅಥವಾ ಭೂಕಂಪನ ವಲಯವಾಗಿದ್ದರೆ.

- ಆಯೋಜಕರು ಶಿಕ್ಷಣಾರ್ಥಿ ಗುಂಪನ್ನು ಆತ್ಮಾವಲೋಕನದ ಅಭ್ಯಾಸಕ್ಕೆ ಒಳಗಾಗುವಂತೆ ಮಾಡಿರಿ, ಅಲ್ಲಿ ಅವರ ಪರಿಸರಕ್ಕೆ ಹಾನಿಯನ್ನುಂಟುಮಾಡುವ ವಿವಿಧ ವಿಧಾನಗಳನ್ನು ತಿಳಿಸಿರಿ ಉದಾಹರಣೆಗೆ, ಪಾಲಿಬ್ಯಾಗ್‌ಗಳನ್ನು ಬಳಸುವುದು, ಮರಗಳನ್ನು ಕತ್ತರಿಸುವುದು, ಕೀಟನಾಶಕಗಳನ್ನು ಬಳಸುವುದು, ನೀರಿನ ನಲ್ಲಿಗಳು ಸೋರಿಕೆಯಾಗಲು ಬಿಡುವುದು ಇತ್ಯಾದಿ. ಅವುಗಳ ಪಟ್ಟಿಯನ್ನು ಹಲಗೆಯ ಮೇಲೆ ಶಿಕ್ಷಣಾರ್ಥಿಯರಿಗೆ ಬರೆಯಲು ತಿಳಸಿ. ಆಯೋಜಕರು ಪಟ್ಟಿಯನ್ನು ಬರೆದುಕೊಳ್ಳಬಹುದು ಅಥವಾ ಮುಂದಿನ ಚಟುವಟಿಕೆಗಾಗಿ ಚರ್ಚಿಸಲು ಪಟ್ಟಿಯನ್ನು ಹಲಗೆಯ ಮೇಲೆ ಇರಿಸಬಹುದು.



## ಚಟುವಟಿಕೆ 2



### ಉದ್ದೇಶಗಳು

- ಶಿಕ್ಷಣಾರ್ಥಿಯರು ಅವರ ಪರಿಸರವನ್ನು ರಕ್ಷಿಸುವ ವಿವಿಧ ವಿಧಾನಗಳ ಬಗ್ಗೆ ಯೋಚಿಸಲು ಪ್ರೋತ್ಸಾಹಿಸುವುದು ಮತ್ತು
- ಶಿಕ್ಷಣಾರ್ಥಿಯರನ್ನು ಪರಿಸರವನ್ನು ರಕ್ಷಿಸುವ ಬಗ್ಗೆ ಸಮುದಾಯದ ಸದಸ್ಯರಲ್ಲಿ ಜಾಗೃತಿ ಮೂಡಿಸಲು ಪ್ರೇರೇಪಿಸುವುದು.

### METHOD ವಿಧಾನ

ಕೊನೆಯ ಚಟುವಟಿಕೆಯಲ್ಲಿ ಶಿಕ್ಷಣಾರ್ಥಿಯರು ಹಂಚಿಕೊಂಡ ಪರಿಸರವನ್ನು ಹಾನಿ ಮಾಡುವ ವಿಧಾನಗಳ ಪಟ್ಟಿಯನ್ನು ಆಯೋಜಕರು ಇರಿಸುವುದು. ಸಮುದಾಯದಲ್ಲಿನ ಪರಿಸರವನ್ನು ಹಾಳುಮಾಡುವ ಜನರನ್ನು ಅವರು ಗಮನಿಸಿರುವ ಇತರ ವಿಧಾನಗಳನ್ನು ಆಯೋಜಕರು ಸೇರಿಸಿರಿ, ಉದಾಹರಣೆಗೆ, ಧಾರ್ಮಿಕ ಉತ್ಸವದ ಸಮಯದಲ್ಲಿ, ಜನರು ಮಾನವ ನಿರ್ಮಿತ, ಕೊಳೆಯದ ವಸ್ತುಗಳನ್ನು ಬಹಳಷ್ಟು ಹತ್ತಿರದಲ್ಲಿ ಹರಿಯುವ ನದಿ ಅಥವಾ ಹೊಳೆಯಲ್ಲಿ ಹಾಕುತ್ತಾರೆ. ಅಂತಹ ಕ್ರಿಯೆಗಳು ಬೀರುವ ಪರಿಣಾಮಗಳ ಬಗ್ಗೆ ಮತ್ತು ಪರಿಸರವನ್ನು ರಕ್ಷಿಸಲು ನಾವು ಹೇಗೆ ಮಾರ್ಗಗಳನ್ನು ಬದಲಾಯಿಸಬಹುದು ಎಂಬುದರ ಕುರಿತು ಬುದ್ದಿಮಂಥನ ಮಾಡಲು ಶಿಕ್ಷಣಾರ್ಥಿಯರ ಗುಂಪಿಗೆ ಹೇಳುವುದು. ಎಲ್ಲಾ ವಿಚಾರಗಳನ್ನು ಕೆಳಗೆ ಪಟ್ಟಿ ಮಾಡಬಹುದು.

**ಆಯೋಜಕರು ಶಿಕ್ಷಣಾರ್ಥಿಯರಿಗೆ ಹೊಸ ಆಲೋಚನೆಗಳನ್ನು ನೀಡಿರಿ, ಅದನ್ನು ಶಿಕ್ಷಣಾರ್ಥಿಯ ಗುಂಪಿನಿಂದ ಕೂಡ ತೆಗೆದುಕೊಳ್ಳಬಹುದಾಗಿದೆ:**

- ಪ್ರತಿ ತಿಂಗಳು ಪರಿಸರ ದಿನವನ್ನು ಆಚರಿಸುವುದು, ಅಲ್ಲಿ 10 ವಿವಿಧ ಜನರು 10 ಮರಗಳನ್ನು ನೆಡುವುದು ಮತ್ತು ಅವರ ಹೆಸರಿನ ಮರಗಳಿಗೆ ಅವರ ಹೆಸರನ್ನು ಇಡುವುದು ಮತ್ತು ಅವುಗಳ ಆರೈಕೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.
- ಪೋಷಕಾಂಶ ಭರಿತ ಗೊಬ್ಬರವನ್ನು ತಯಾರಿಸಲು ಅಡಿಗೆ ತ್ಯಾಜ್ಯವನ್ನು ಕಾಂಪೋಸ್ಟ್ ಮಾಡುವುದು
- ಕೃತಕ ಕೀಟನಾಶಕಗಳಿಗಿಂತ ನೈಸರ್ಗಿಕ ಕೀಟನಾಶಕಗಳನ್ನು ಅನ್ವೇಷಿಸುವುದು
- ಪಾಲಿ ಬ್ಯಾಗ್‌ಗಳನ್ನು ಬಳಸದೆ ಇರುವುದು
- ಸರಿಯಾದ ನಲ್ಲಿಗಳನ್ನು ಹಾಕುವ ಮೂಲಕ ನೀರು ವ್ಯರ್ಥವಾಗುವುದನ್ನು ತಪ್ಪಿಸುವುದು
- ವಸ್ತುಗಳನ್ನು ಮರುಬಳಕೆ ಮಾಡುವುದು
- ಕಾಗದವನ್ನು ಮರುಬಳಕೆ ಮಾಡುವ ಮೂಲಕ ವ್ಯರ್ಥವಾಗುವುದನ್ನು ತಪ್ಪಿಸುವುದು ಮತ್ತು ಅಂತಿಮವಾಗಿ ಅದನ್ನು ಕೈಯಿಂದ–ಮಾಡುವ–ಕಾಗದವನ್ನು ಮಾಡಲು ಮರುಬಳಕೆ ಮಾಡುವುದು. ಕೈಯಿಂದ ಮಾಡಿದ ಕಾಗದವನ್ನು ತಯಾರಿಸಲು, ಮರುಬಳಕೆ ಮಾಡಬೇಕಾದ ಕಾಗದವನ್ನು ಮಕ್ಕಳು ಸಣ್ಣ ತುಂಡುಗಳಾಗಿ ಹರಿದು ಹಾಕಬೇಕು. ನಂತರ ಎಲ್ಲಾ ತುಂಡುಗಳನ್ನು ಕನಿಷ್ಠ ಪ್ರಮಾಣದ ನೀರಿನಲ್ಲಿ ನೆನೆಸುವುದು. ಕಾಗದದ ತಿರುಳನ್ನು ತಯಾರಿಸಲು ನೀರು ಸಾಕಷ್ಟು ಇರಬೇಕು. ನಂತರ, ವಿವಿಧ ಬಣ್ಣದ ಕಾಗದವನ್ನು ತಯಾರಿಸಲು ಹಳದಿ, ನೀಲಿ ಅಥವಾ ಇತರ ನೈಸರ್ಗಿಕ ಪದಾರ್ಥಗಳನ್ನು ಕಾಗದದ–ತಿರುಳಿಗೆ ಸೇರಿಸಿರಿ. ಕಾಗದದ–ತಿರುಳು ಜೋಡಣೆ ಸಹಾಯಕ್ಕೆ ಸ್ವಲ್ಪ ಗಮ್‌ನ್ನು ಕಾಗದದ–ತಿರುಳಿಗೆ ಸೇರಿಸುವುದು. ಕಾಗದದ–ತಿರುಳು ಸಿದ್ಧವಾದ ನಂತರ, ನೀವು ಅದನ್ನು ಜರಡಿ ಮೇಲೆ ಹರಡಿ ಮತ್ತು ಒಣಗಿಸುವುದು. ಉತ್ತಮ ಗುಣಮಟ್ಟದ ಕಾಗದವನ್ನು ಮಾಡಲು ತೆಳುವಾದ ಪದರಗಳಾಗಿ ಹರಡಿ ಒಣಗಿಸುವುದು. ಸಣ್ಣ ಪ್ರಮಾಣದ ಕಾಗದದ ಚೂರುಗಳಿಂದ ಕಾಗದದಿಂದ ಕೈಯಿಂದ–ಮಾಡುವ–ಕಾಗದವನ್ನು ಮೊದಲು ಮಾಡಲು ಪ್ರಯತ್ನಿಸಿ.
- ಮದುವೆ ಅಥವಾ ಸಮಾರಂಭಗಳಲ್ಲಿ ಜೋರಾಗಿ ಸಂಗೀತ ನುಡಿಸುವುದನ್ನು ನಿಷೇಧಿಸುವುದು



ಶಿಕ್ಷಣಾರ್ಥಿಯ ಗುಂಪು ಸಂಪೂರ್ಣ ಪಟ್ಟಿಯನ್ನು ಮಾಡಿದ ನಂತರ, ಪ್ರತಿ ಶಿಕ್ಷಣಾರ್ಥಿಯರಿಗೆ ಅವರು ಪಟ್ಟಿಯಲ್ಲಿ ಮಾಡುವ ಕನಿಷ್ಠ ಮೂರು ವಿಷಯಗಳನ್ನು ಆಯ್ಕೆ ಮಾಡಲು ಹೇಳಿರಿ ಮತ್ತು ಅವರ ಪರಿಸರವನ್ನು ಉಳಿಸುವ ಪ್ರಜ್ಞಾಪೂರ್ವಕ ನಿರ್ಧಾರವನ್ನು ಮಾಡುವ ಅನುಭವವನ್ನು ಗುಂಪಿನ ಸದಸ್ಯರೊಂದಿಗೆ ಹಂಚಿಕೊಳ್ಳಲಿ.

ಆಯೋಜಕರು ಪ್ರಧಾನ ಮಂತ್ರಿಯವರ ಪ್ರಮಾಣವಚನವನ್ನು (ಸಂವಿಧಾನದಲ್ಲಿ ನೀಡಿರುವಂತೆ) ಶಿಕ್ಷಣಾರ್ಥಿಯರ ಗುಂಪಿನೊಂದಿಗೆ ಹಂಚಿಕೊಳ್ಳಬಹುದು, ಈಗ ಅವರೆಲ್ಲರೂ ಪರಿಸರ ಮಂತ್ರಿಗಳು ಮತ್ತು ಅವರು ಪರಿಸರವನ್ನು ರಕ್ಷಿಸಲು ಪ್ರಮಾಣ ವಚನ ಸ್ವೀಕರಿಸಬೇಕಾಗಿದೆ ಎಂದು ಅವರಿಗೆ ಹೇಳಬಹುದು. ಪ್ರಧಾನ ಮಂತ್ರಿಯವರ ಪ್ರಮಾಣ ವಚನವನ್ನು ಕೆಳಗೆ ನೀಡಲಾಗಿದೆ:

**ನಾನು, ನರೇಂದ್ರ ಮೋದಿ, ನಾನು ದೇವರ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ/ಭಾರತದ ಸಂವಿಧಾನಕ್ಕೆ ನಾನು ನಿಜವಾದ ನಂಬಿಕೆ ಮತ್ತು ನಿಷ್ಠೆಯನ್ನು ಹೊಂದಿದ್ದೇನೆ ಎಂದು ಪ್ರತಿಜ್ಞೆ ಮಾಡುತ್ತೇನೆ, ನಾನು ಭಾರತದ ಸಾರ್ವಭೌಮತೆ ಮತ್ತು ಸಮಗ್ರತೆಯನ್ನು ಎತ್ತಿಹಿಡಿಯುತ್ತೇನೆ, ನಾನು ನಿಷ್ಠೆಯಿಂದ ಮತ್ತು ಆತ್ಮಸಾಕ್ಷಿಯಂತೆ ನೆಡೆಯುತ್ತೇನೆ. ಕೇಂದ್ರಕ್ಕಾಗಿ ಪ್ರಧಾನ ಮಂತ್ರಿಯಾಗಿ ನನ್ನ ಕರ್ತವ್ಯಗಳನ್ನು ನಿರ್ವಹಿಸುತ್ತೇನೆ ಮತ್ತು ನಾನು ಸಂವಿಧಾನ ಮತ್ತು ಕಾನೂನಿನ ಪ್ರಕಾರ ಎಲ್ಲಾ ರೀತಿಯ ಜನರಿಗೆ ಭಯವಿಲ್ಲದ ಅಥವಾ ಜನರ ಪರವಾಗಿ, ಪ್ರೀತಿ ಅಥವಾ ಕೆಟ್ಟ ಇಚ್ಛೆಯಿಲ್ಲದ ಹಕ್ಕಲ್ಲಿ ನೆಡೆಯುತ್ತೇನೆ.**

**ಭಾರತದ ಸಂವಿಧಾನ, ಮೂರನೆಯದು**
**ಷೆಡ್ಯೂಲ್–1, ಭಾಗ**

ಶಿಕ್ಷಣಾರ್ಥಿ ಗುಂಪು ಅವರದೇ ಆದ ಪ್ರತಿಜ್ಞೆಯನ್ನು ವಿನ್ಯಾಸಗೊಳಿಸಲು ಹೇಳಿರಿ ಮತ್ತು ನಂತರ ಅವರೆಲ್ಲರೂ ಒಟ್ಟಾಗಿ ಆ ವಚನವನ್ನು ಆಯೋಜಕರ ಜೊತೆ ಹೇಳುವುದು.

### ಶಿಕ್ಷಣಾರ್ಥಿಯರಿಗೆ ಕಾರ್ಯಗಳು

ಶಿಕ್ಷಣಾರ್ಥಿಯರು ಅವರ ಮನೆಯಲ್ಲಿ ಮರುಉಪಯೋಗ ಮಾಡಬಹುದಾದ ಅಥವಾ ಮರುಬಳಕೆ ಮಾಡಬಹುದಾದ ಮೂರು ವಿ□ಯಗಳ ಬಗ್ಗೆ ಯೋಚಿಸಲು ಹೇಳಿರಿ ಮತ್ತು ಅದನ್ನು ಹೇಗೆ ಮರುಬಳಕೆ ಮಾಡುತ್ತಾರೆ ಎಂಬುದನ್ನು ಗುಂಪಿನೊಂದಿಗೆ ಹಂಚಿಕೊಳ್ಳಲಿ.

### ಚರ್ಚಿಸಬೇಕಾದ ಅಂಶಗಳು

- ಪರಿಸರವನ್ನು ರಕ್ಷಿಸಲು ಮಳೆನೀರನ್ನು ಉಳಿಸುವಂತಹ ವಿವಿಧ ಮಾರ್ಗಗಳ ಬಗ್ಗೆ ಬುದ್ದಿಮಂಥನ ಮಾಡಲು ಆಯೋಜಕರು ಶಿಕ್ಷಣಾರ್ಥಿ ಗುಂಪನ್ನು ಪ್ರೋತ್ಸಾಹಿಸಿರಿ. ಅವರು ಬಳಸುತ್ತಿರುವ ಪ್ರಾಯೋಗಿಕ ವಿಚಾರಗಳ ಜೊತೆಗೆ ಅವರ ಸೃಜನಶೀಲ ಆಲೋಚನೆಗಳೊಂದಿಗೆ ಬರುವಂತೆ ಅವರಿಗೆ ಅವಕಾಶ ನೀಡಿರಿ.
- ನಮ್ಮ ಸುತ್ತಲಿನ ಮರಗಳನ್ನು ಹೇಗೆ ರಕ್ಷಿಸಲು ಉದ್ದೇಶಿಸಲಾಗಿದೆ ಎಂಬುದಕ್ಕೆ ಮರಗಳಿಗೆ ಪ್ರಾರ್ಥನೆಯನ್ನು ಹೊಂದಿಸುವಂತಹ ಸಮುದಾಯದ ಸಾಂಸ್ಕೃತಿಕ ಸಂಪ್ರದಾಯಗಳಿಗೆ ಆಯೋಜಕರು ವಿವಿಧ ತಂತ್ರಗಳನ್ನು ಹೊಂದಿಕೆ ಮಾಡಬಹುದು.
- ಪ್ರಮಾಣ ವಚನ ಸ್ವೀಕಾರ ಸಮಾರಂಭವನ್ನು ಗಂಭೀರವಾಗಿ ನಡೆಸಬೇಕು ಮತ್ತು ಪ್ರತಿ ಸಣ್ಣ ಹೆಜ್ಜೆ ಎಷ್ಟು ಮುಖ್ಯ ಹಾಗೂ ಅವರ ಪ್ರಯೋಜನಕ್ಕಾಗಿ ಶಿಕ್ಷಣಾರ್ಥಿಯರಿಗೆ ಅರಿವು ಮೂಡಿಸುವುದು ಆಯೋಜಕರಿಗೆ ಕಡ್ಡಾಯವಾಗಿದೆ. ಶಿಕ್ಷಣಾರ್ಥಿಯರು ಅವರ ಅಂಗಳದಲ್ಲಿ ಮರಗಳನ್ನು ನೆಟ್ಟರೆ ಅದು ಅವರಿಗೆ ನೆರಳು ಮತ್ತು ಇತರ ಪ್ರಯೋಜನಗಳನ್ನು ನೀಡುವುದು.
- ಆಯೋಜಕರು ಶಿಕ್ಷಣಾರ್ಥಿಯರಿಗೆ ಕೈಯಿಂದ–ಮಾಡಿದ–ಕಾಗದವನ್ನು ತಯಾರಿಸಲು ಸಹಾಯ ಮಾಡಿರಿ. ಬದಲಿಗೆ ಈ ಅಭ್ಯಾಸವನ್ನು ಕೇಂದ್ರದಲ್ಲಿ ನಡೆಸಬಹುದು, ಶಿಕ್ಷಣಾರ್ಥಿಯರಿಗೆ ಕಾಗದವನ್ನು ಮರುಬಳಕೆ ಮಾಡುವುದು ಹೇಗೆಂದು ತಿಳಿಯಲು ಸಹಾಯ ಮಾಡುತ್ತದೆ.
- ಶಿಕ್ಷಣಾರ್ಥಿಗಳು ಅವರ ಸಮುದಾಯದ ಸದಸ್ಯರಲ್ಲಿ ವಿವಿಧ ವಿಧಾನಗಳನ್ನು ಬಳಸಿಕೊಂಡು ಜಾಗೃತಿ ಮೂಡಿಸಲು ಪ್ರೋತ್ಸಾಹಿಸಿರಿ, ಇದರಿಂದ ಎಲ್ಲಾ ಸದಸ್ಯರು ಒಟ್ಟಾಗಿ ಪರಿಸರವನ್ನು ರಕ್ಷಿಸಲು ಕೆಲಸ ಮಾಡುವುದು.

ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).

# ಪಾಠ 55

## ಸ್ವಯಂಸೇವಕರು ಏಕೆ?



### ಪಾಠದ ಉದ್ದೇಶಗಳು

- ಯುವಕರನ್ನು ಸ್ವಯಂಸೇವಕರಾಗಿ ಮತ್ತು ಅವರ ಸಮುದಾಯಕ್ಕಾಗಿ ಕೆಲಸ ಮಾಡಲು ಪ್ರೋತ್ಸಾಹಿಸುವುದು, ಮತ್ತು
- ಶಿಕ್ಷಣಾರ್ಥಿಯರೊಂದಿಗೆ ಸ್ವಯಂಪ್ರೇರಿತ ಸೇವೆಯ ಪ್ರಯೋಜನಗಳನ್ನು ಚರ್ಚಿಸುವುದು.

**ಅವಧಿ: 45 ನಿಮಿಷಗಳು**

**ಸಮಯ ವಿಂಗಡನೆ**

| 15 ನಿಮಿಷ | 15 ನಿಮಿಷ | 15 ನಿಮಿಷ |
|---|---|---|
| ಚಟುವಟಿಕೆ 1 | ಚಟುವಟಿಕೆ 1 ಕುರಿತು ಚರ್ಚೆ | ದೃಷ್ಟಾಂತ ಕಲಿಕೆ ಮತ್ತು ಚರ್ಚೆ |

**ತರಬೇತಿಗೆ ಬೇಕಾದ ಸಾಮಗ್ರಿಗಳು**

ಕಪ್ಪು ಹಲಗೆ, ಸೀಮೆಸುಣ್ಣ, 04 ಕಾಗದದ ಹಾಳೆಗಳು ಮತ್ತು ಬಣ್ಣದ ಪೆನ್ಸಿಲ್‌ಗಳು/ಸ್ಕೆಚ್ ಪೆನ್ನುಗಳು

**ಪರಿಕಲ್ಪನ ಟಿಪ್ಪಣಿ**

ಕಳೆದ ನಾಲ್ಕು ಪಾಠಗಳಲ್ಲಿ ಸಮುದಾಯ ಆಧಾರಿತ ಯೋಜನೆಗಳನ್ನು ಗುಂಪು ಹೇಗೆ ಚರ್ಚಿಸಿದೆ ಮತ್ತು ಈ ಯೋಜನೆಗಳ ಬೆನ್ನೆಲುಬು ಯುವಕರು ಮಾಡುವ ಸ್ವಯಂಸೇವಕ ಸೇವೆಯಲ್ಲಿ ಹೇಗೆ ಅಡಗಿದೆ ಎಂಬುದನ್ನು ಚರ್ಚಿಸುವ ಮೂಲಕ ಆಯೋಜಕರು ತರಗತಿಯನ್ನು ಪ್ರಾರಂಭಿಸಿರಿ.

ಯಾವುದೇ ವೈಯಕ್ತಿಕ ಕಾರಣಗಳಿಲ್ಲದೆ ಶಿಕ್ಷಣಾರ್ಥಿಯರು ಯಾರಿಗಾದರೂ ಸಹಾಯ ಮಾಡಿದ್ದೀರಾ ಮತ್ತು ಸಹಾಯ ಮಾಡಿದ ನಂತರ ಅವರಿಗೆ ಹೇಗೆ ಅನಿಸಿತು ಎಂಬುದನ್ನು ಹಂಚಿಕೊಳ್ಳಲು ಆಯೋಜಕರು ಶಿಕ್ಷಣಾರ್ಥಿಯರನ್ನು ಕೇಳಿರಿ. ಅವರು ಯಾರಿಗಾದರೂ ಬೇಡ ಎಂದು ಹೇಳಿದ್ದಾರಾ ಮತ್ತು ಅದರ ನಂತರ ಅವರು ಹೇಗೆ ಭಾವಿಸಿದರು ಎಂದು ಆಯೋಜಕರು ಶಿಕ್ಷಣಾರ್ಥಿಯರನ್ನು ಕೇಳಿರಿ. ಆಯೋಜಕರು ಸ್ವಯಂಪ್ರೇರಿತ ಸೇವೆಯ ತಿಳುವಳಿಕೆಯನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಲು ಶಿಕ್ಷಣಾರ್ಥಿಯರ ಪ್ರತಿಕ್ರಿಯೆಗಳನ್ನು ಬಳಸಬಹುದು. ಆಯೋಜಕರು ಪ್ರತಿಕ್ರಿಯೆಗಳನ್ನು ಫಲಕದಲ್ಲಿ ಬರೆಯುವುದು. ಶಿಕ್ಷಣಾರ್ಥಿಯರು ಈ ಕೆಳಗಿನ ಚಟುವಟಿಕೆಯ ಸಹಾಯದಿಂದ ಸ್ವಯಂಪ್ರೇರಿತ ಚಟುವಟಿಕೆಯ ಪ್ರಯೋಜನಗಳನ್ನು ಮತ್ತಷ್ಟು ಚರ್ಚಿಸಿರಿ.



## ಚಟುವಟಿಕೆ 1



### ಉದ್ದೇಶಗಳು:

- ಶಿಕ್ಷಣಾರ್ಥಿಯರನ್ನು ಸ್ವಯಂಸೇವಕರಾಗಿ ಮತ್ತು ಅವರ ಸಮುದಾಯಕ್ಕಾಗಿ ಕೆಲಸ ಮಾಡಲು ಪ್ರೋತ್ಸಾಹಿಸುವುದು, ಮತ್ತು
- ಶಿಕ್ಷಣಾರ್ಥಿಯರೊಂದಿಗೆ ಸ್ವಯಂಪ್ರೇರಿತ ಸೇವೆಯ ಪ್ರಯೋಜನಗಳನ್ನು ಚರ್ಚಿಸುವುದು

METHOD

### ವಿಧಾನ

ಶಿಕ್ಷಣಾರ್ಥಿಯರನ್ನು ಜೋಡಿಗಳಾಗಿ ವಿಂಗಡಿಸಿರಿ. ಪ್ರತಿ ಜೋಡಿಗೆ 04 ಹಾಳೆಯನ್ನು ನೀಡಿರಿ. ಮಧ್ಯದಲ್ಲಿ ಸೂರ್ಯನನ್ನು ಬರೆಯಲು ಹೇಳಿರಿ. ಶಿಕ್ಷಣಾರ್ಥಿಯರನ್ನು ಮಧ್ಯದಲ್ಲಿ ಸೂರ್ಯ ಇರುವುದೆಂದು ಯೋಚಿಸಲು ತಿಳಿಸಿರಿ ಮತ್ತು ಸೂರ್ಯನು ಸ್ವಯಂಪ್ರೇರಿತ ಸೇವೆ ಮಾಡುವಾಗ ಅದರ ಕಿರಣಗಳು ಇತರ ಜನರನ್ನು ತಲುಪುವವು ಹಾಗೂ ಸಹಾಯ ಮಾಡುವವು. ಶಿಕ್ಷಣಾರ್ಥಿಯರು ಅವರ ಚಿತ್ರದಲ್ಲಿ, "ಸೂರ್ಯನ ಸ್ವಯಂಪ್ರೇರಿತ ಚಟುವಟಿಕೆಯಿಂದ ಯಾರು ಪ್ರಯೋಜನ ಪಡೆಯುತ್ತಾರೆ ಮತ್ತು ಹೇಗೆ?" ಎಂದು ಬರೆಯಬೇಕು ಮತ್ತು ಕೆಳಗೆ ನೀಡಲಾದ ಚಿತ್ರದಲ್ಲಿ ಅಂಕಗಳನ್ನು ಭರ್ತಿ ಮಾಡಲು ಹೇಳಿ.

ಶಿಕ್ಷಣಾರ್ಥಿಯರು ಅವರ ಪ್ರತಿಕ್ರಿಯೆಗಳ ಬಗ್ಗೆ ಯೋಚಿಸಲು ಸುಮಾರು 10 ನಿಮಿಷಗಳನ್ನು ನೀಡಿರಿ. ಆಯೋಜಕರು ಶಿಕ್ಷಣಾರ್ಥಿಯರ ಪ್ರತಿಕ್ರಿಯೆಯನ್ನು ಹಂಚಿಕೊಳ್ಳಲು ಪ್ರತಿ ಜೋಡಿಗೂ ಹೇಳಿರಿ. ಪ್ರತಿಕ್ರಿಯೆಗಳನ್ನು ಹಂಚಿಕೊಂಡ ನಂತರ, ಸ್ವಯಂಪ್ರೇರಿತ ಸೇವೆಯಿಂದ ಸಾಧಿಸುವ ಪ್ರಯೋಜನಗಳನ್ನು ಅವರು ಹಂಚಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ಸಹ ಪರಮರ್ಶಿಸಿ. ಇಲ್ಲದಿದ್ದರೆ, ಮುಂದಿನ ಚರ್ಚೆಯನ್ನು ಕೈಗೊಳ್ಳಲು ಆಯೋಜಕರು ಕೆಳಗೆ ನೀಡಿರುವ ಸೂಚನೆಗಳನ್ನು ಚರ್ಚಿಸಿರಿ.

### ಚರ್ಚಿಸಬೇಕಾದ ಅಂಶಗಳು: ಆಯೋಜಕರು

- ಸ್ವಯಂಪ್ರೇರಿತ ಸೇವೆಯು ಯುವಕರು, ಅವರ ಕುಟುಂಬ, ಸ್ನೇಹಿತರು, ಸಮುದಾಯ, ಗ್ರಾಮ, ಸ್ಥಳೀಯ ಎನ್‌ಜಿಒಗಳು ಮತ್ತು ಇತರ ಸೇವೆಗಳಾದ ಶಾಲೆ, ಆರೋಗ್ಯ ಸೇವೆಗಳು ಇತ್ಯಾದಿಗಳಿಗೆ ಹೇಗೆ ಪ್ರಯೋಜನವನ್ನು ನೀಡುವರು ಎಂಬುದನ್ನು ಕೆಳಗೆ ನೀಡಲಾದ ದೃಶ್ಯದ ಸಹಾಯದಿಂದ ಚರ್ಚಿಸಿರಿ. ತಿಳಿಸಿದ ಎಲ್ಲಾ ಸದಸ್ಯರಿಗೆ ಹೇಗೆ ಪ್ರಯೋಜನವನ್ನು ನೀಡುವರು ಎಂದು ಕೇಳಿರಿ. ಕೊನೆಯಲ್ಲಿ, ಬದ್ಧತೆ ಮತ್ತು ಸರಿಯಾಗಿ ಮಾಡಿದ ಸ್ವಯಂಸೇವಾ ಸೇವೆಯು ರಾಷ್ಟ್ರದ ಬೆಳವಣಿಗೆಗೆ ಹೇಗೆ ಸಹಾಯ ಮಾಡುವುದು ಚರ್ಚಿಸಿರಿ




- ಕಡಿಮೆ ವೆಚ್ಚದಲ್ಲಿ ಹೆಚ್ಚಿನ ಸಂಖ್ಯೆಯ ಜನರಿಗೆ ಉತ್ತಮ ಸೇವೆಯನ್ನು ಒದಗಿಸಲು ಸ್ವಯಂಸೇವಾ ಸೇವೆಯು ಸಂಸ್ಥೆಗಳಿಗೆ ಹೇಗೆ ಸಹಾಯ ಮಾಡುವವು ಎಂಬುದನ್ನು ಹಂಚಿಕೊಳ್ಳಿರಿ. ಹೆಚ್ಚಿನ ಸಂಖ್ಯೆಯ ಜನರಿಗೆ ಸಹಾಯ ಮಾಡಲು ಹಣವನ್ನು ಬಳಸಬಹುದು. ಇದು ಯುವಕರು ಬದಲಾವಣೆಯನ್ನು ನೋಡಲು ಮತ್ತು ಸಮಾಜಕ್ಕೆ ಅವರು ಮಾಡಲು ಬಯಸುವ ಬದಲಾವಣೆಗೆ ಕೊಡುಗೆ ನೀಡಲು ಸಹಾಯ ಮಾಡುವವು.

- ಈ ಕೆಳಗಿನ ಕಾರಣಗಳಿಗಾಗಿ ಯಾವುದೇ ಸ್ವಯಂಸೇವಾ ಸೇವೆಯ ದೊಡ್ಡ ಫಲಾನುಭವಿ ಯುವಕರೇ ಎಂಬುದನ್ನು ಒತ್ತಿಹೇಳುವುವು:

- ಸ್ವಯಂಪ್ರೇರಿತ ಸೇವೆಯು ಯುವಕರು ಸಂವಹನ ಕೌಶಲ್ಯಗಳು, ನಾಯಕತ್ವ ಕೌಶಲ್ಯಗಳು, ಕೆಲವೊಮ್ಮೆ ಉದ್ಯೋಗ – ಸಂಬಂಧಿತ ಕೌಶಲ್ಯಗಳು, ಉತ್ತಮ ಜ್ಞಾನದ ಮೂಲಗಳಂತಹ ಹೊಸ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುವವು, ಏಕೆಂದರೆ ಅವರು ಹಿಂದೆಂದೂ ವ್ಯವಹರಿಸದ ವಿವಿಧ ಅಂಶಗಳನ್ನು ತಿಳಿದುಕೊಳ್ಳುವರು.

- ಸ್ವಯಂಪ್ರೇರಿತ ಸೇವೆಯು ಸೇವಕರಿಗೆ ಕೆಲಸದ ಅನುಭವವನ್ನು ನೀಡುತ್ತದೆ, ಇಲ್ಲದಿದ್ದರೆ ಸಿಗುವುದಿಲ್ಲ. ಹೀಗಾಗಿ, "ಕೆಲಸ ಮಾಡುವ" ಜಗತ್ತನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅವರಿಗೆ ಸಹಾಯ ಮಾಡುವುದು ನಂತರ ಉದ್ಯೋಗಗಳನ್ನು ತೆಗೆದುಕೊಳ್ಳಲು ಸಹಾಯ ಮಾಡುವವು.

- ಸ್ವಯಂಪ್ರೇರಿತ ಸೇವಕರು ಏನನ್ನಾದರೂ ಮಾಡಲು ಮತ್ತು ಸಮಾಜದಲ್ಲಿ ಬದಲಾವಣೆಯನ್ನು ತರಲು ಸಮರ್ಥರಾಗಿದ್ದಾರೆ ಎಂಬ ಸಬಲೀಕರಣದ ಭಾವನೆಯನ್ನು ನೀಡುವವು. ಸ್ವಾಭಿಮಾನವನ್ನು ಹೆಚ್ಚಿಸುವುದು, ಆತ್ಮವಿಶ್ವಾಸ ಮತ್ತು ಸಕಾರಾತ್ಮಕ ಗುರುತಿನ ಪ್ರಜ್ಞೆಯನ್ನು ಅಭಿವೃದ್ಧಿಪಡಿಸುವುದು. ಸ್ವಯಂಪ್ರೇರಿತ ಕೆಲಸದಲ್ಲಿ ತೊಡಗಿರುವ ಯುವಕರು ಧನಾತ್ಮಕ ಗುರುತನ್ನು ಮತ್ತು ಸ್ವಯಂ–ನಂಬಿಕೆಯ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಸಾಧ್ಯತೆಯಿದೆ ಮತ್ತು ಯಾವುದೇ ಸ್ವಯಂಪ್ರೇರಿತ ಸೇವೆಯಲ್ಲಿ ತೊಡಗಿಸಿಕೊಳ್ಳದ ಯುವಕರಿಗೆ ಹೋಲಿಸಿದರೆ ಅಪಾಯಕಾರಿ, ಅನಾರೋಗ್ಯಕರ ನಡವಳಿಕೆಗಳನ್ನು ಪ್ರಯೋಗಿಸುವ ಸಾಧ್ಯತೆ ಕಡಿಮೆ ಎಂದು ಸಂಶೋಧನೆ ತೋರಿಸುತ್ತದೆ.

- ಗೆಳೆಯರು ಮತ್ತು ಸಮುದಾಯದ ಇತರ ಸದಸ್ಯರೊಂದಿಗೆ ಅರ್ಥಪೂರ್ಣ ಆರೋಗ್ಯಕರ ಪರಸ್ಪರ ಸಂಬಂಧಗಳನ್ನು ಅಭಿವೃದ್ಧಿಪಡಿಸಲು ಸ್ವಯಂಪ್ರೇರಿತ ಸೇವೆಯು ಅವರಿಗೆ ಸಹಾಯ ಮಾಡುತ್ತದೆ.

## ಶಿಕ್ಷಣಾರ್ಥಿಯರಿಗೆ ಕಾರ್ಯಗಳು

ಶಿಕ್ಷಣಾರ್ಥಿಯರು ಅವರ ಗ್ರಾಮದಲ್ಲಿ ಎರಡು ಗಂಟೆಗಳ ಕಾಲ ಸ್ವಯಂಪ್ರೇರಿತ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು ಮತ್ತು ಮರಳಿ ಬಂದು ಅವರ ಅನುಭವವನ್ನು ಹಂಚಿಕೊಳ್ಳಬೇಕು.




ಜೂಲಿಯಾ 17 ವರ್ಷದ ಹುಡುಗಿ. 12ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಅವಳು ತನ್ನ ಜಿಲ್ಲೆಯ ಹಾಕಿ ಆಟಗಾರ್ತಿ. ಆಕೆಗೆ ಒಳ್ಳೆಯ ವೈದ್ಯೆಯಾಗಬೇಕೆಂಬ ಆಸೆಯಿದೆ. ಅವಳು ಸ್ವಯಂ ಪ್ರೇರಿತ ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಹೊಂದಿದ್ದಾಳೆ. ಅವಳು ತನ್ನ ತಾಯಿಯೊಂದಿಗೆ ವಾಸಿಸುವಳು ಮತ್ತು ಹೆಚ್ಚಿನ ಸಮಯವನ್ನು ತಾಯಿಯೊಂದಿಗೆ ಕಳೆಯುವಳು. ಮನೆಕೆಲಸಗಳಲ್ಲಿ ತಾಯಿಗೆ ಸಹಾಯ ಮಾಡುವಳು. ಅವಳು ಸ್ನೇಹಪರಳು ಮತ್ತು ಇತರರಿಗೆ ಸಹಾಯ ಮಾಡಲು ಇಷ್ಟಪಡುವಳು. ಅವಳು ಮದರ್ ತೆರೇಸಾಳನ್ನು ಅವಳ ಆರಾಧ್ಯ ದೈವವಾಗಿ ಅನುಸರಿಸುವಳು. ಅವರ ಮಾನವೀಯತೆಯ ಸೇವೆಯನ್ನು ಮೆಚ್ಚುವಳು.

ಯಾರು ಆರೋಗ್ಯಕರ ಆಹಾರವನ್ನು ತೆಗೆದುಕೊಳ್ಳುತ್ತಾರೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳುತ್ತಾರೆ, ಅವರು ಆರೋಗ್ಯಕರವೆಂದು ಪರಿಗಣಿಸುತ್ತಾರೆ. ಆಕೆಗೆ ಮಲೇರಿಯಾ, ಡೆಂಗ್ಯೂ, ಟೈಫಾಯಿಡ್, ಕ್ಯಾನ್ಸರ್, ಇತ್ಯಾದಿಗಳ ಬಗ್ಗೆ ತಿಳಿದಿದೆ, ಅವರು ಈ ಕಾಯಿಲೆಗಳ ಬಗ್ಗೆ ಹಿರಿಯರು, ತಾಯಿ ಮತ್ತು ಸ್ನೇಹಿತರಿಂದ ಮತ್ತು ಸ್ಥಳೀಯ ಎನ್‌ಜಿಒಗಳಿಂದ ಮಾಹಿತಿ ಪಡೆಯುವಳು. ಅವಳು 10 ನೇ ತರಗತಿಯಲ್ಲಿ ಮುಟ್ಟಿನ ನೈರ್ಮಲ್ಯದ ಬಗ್ಗೆ ಅಧ್ಯಯನ ಮಾಡಿದಳು. ಹದಿಹರೆಯದ ಹೆಣ್ಣುಮಕ್ಕಳಿಗೆ ಸರ್ಕಾರವು ಸ್ಯಾನಿಟರಿ ನ್ಯಾಪ್ಕಿನ್ಗಳನ್ನು ಒದಗಿಸುವ ಬಗ್ಗೆ ಅವಳು ತಿಳಿದಿದ್ದಾಳೆ. ಅವಳು ತನ್ನ ಸಮುದಾಯಕ್ಕಾಗಿ ಏನನ್ನಾದರೂ ಮಾಡಲು ಬಯಸುವಳು ಆದರೆ ಹಾಗೆ ಮಾಡಲು ಹಿಂಜರಿಯುವಳು.

**ಚರ್ಚಾ ಪ್ರಶ್ನೆಗಳು**
**(ದೃಷ್ಟಾಂತ ಕಲಿಕೆ ಓದಿದ ನಂತರ)**

ಜೂಲಿಯಾ ತನ್ನ ಸಮುದಾಯಕ್ಕಾಗಿ ಸ್ವಯಂಪ್ರೇರಿತ ಕೆಲಸವನ್ನು ಕೈಗೊಳ್ಳಲು ನೀವು ಹೇಗೆ ಪ್ರೋತ್ಸಾಹಿಸುವಿರಿ?

ಜೂಲಿಯಾ ಸ್ವಯಂಪ್ರೇರಿತ ಸೇವೆಯನ್ನು ಮಾಡಿದರೆ, ಅವಳಿಗೆ ಸಿಗುವ ಪ್ರಯೋಜನಗಳನ್ನು ಪಟ್ಟಿ ಮಾಡಿ?



ಜೂಲಿಯಾ ಕೆಲಸ ಮಾಡುವ ಕೆಲವು ಕ್ಷೇತ್ರಗಳ ಬಗ್ಗೆ ನೀವು ಯೋಚಿಸಬಹುದೇ?

ಜೂಲಿಯಾ ಸ್ವಯಂಪ್ರೇರಿತ ಸೇವೆಯನ್ನು ಎಲ್ಲಿ ಮಾಡಬಹುದು?

ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ.)

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).



## ಪಾಠ 56

# ಕಾನೂನು ಸಾಕ್ಷರತೆ

### ಪಾಠದ ಉದ್ದೇಶಗಳು

- ದೇಶದ ನಾಗರಿಕರ ಕೆಲವು ಪ್ರಮುಖ ಕಾನೂನುಗಳು ಮತ್ತು ಹಕ್ಕುಗಳ ಬಗ್ಗೆ ಅರಿವು ಮತ್ತು ತಿಳುವಳಿಕೆಯನ್ನು ನೀಡುವುದು,
- ಯುವಜನರು ಕಾನೂನು ಸಂದರ್ಭಗಳನ್ನು ನಿಭಾಯಿಸುವಲ್ಲಿ ಅವರು ಹೊಂದಿರಬಹುದಾದ ಭಯ ಮತ್ತು ಆತಂಕಗಳಿಂದ ಹೊರಬರಲು ಸಹಾಯ ಮಾಡುವುದು, ಮತ್ತು
- ಶಿಕ್ಷಣಾರ್ಥಿಯರ ಸಂವಹನ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಅಭಿವೃದ್ಧಿಪಡಿಸುವುದು.

**ಅವಧಿ: 135 ನಿಮಿಷಗಳು**

### ಸಮಯ ವಿಂಗಡಣೆ

| 75 ನಿಮಿಷಗಳು | 15 ನಿಮಿಷಗಳು | 20 ನಿಮಿಷಗಳು | 10 ನಿಮಿಷಗಳು | 15 ನಿಮಿಷ |
|---|---|---|---|---|
| ಚಟುವಟಿಕೆ 1 | ಚಟುವಟಿಕೆ 1 ರ ಚರ್ಚೆ | ಚಟುವಟಿಕೆ 2 | ಚಟುವಟಿಕೆ 2 ರ ಚರ್ಚೆ | ದೃಷ್ಟಾಂತ ಕಲಿಕೆ ಮತ್ತು ಚರ್ಚೆ |

### ತರಬೇತಿಗೆ ಬೇಕಾದ ಸಾಮಗ್ರಿಗಳು

ಕಪ್ಪು ಹಲಗೆ, ಸೀಮೆಸುಣ್ಣ, 04 ಕಾಗದದ ಹಾಳೆಗಳು ಮತ್ತು ಬಣ್ಣದ ಪೆನ್ಸಿಲ್‌ಗಳು/ಸ್ಕೆಚ್ ಪೆನ್ನುಗಳು.



### ಪರಿಕಲ್ಪನ ಟಿಪ್ಪಣಿ

ಒಬ್ಬ ಪೋಲೀಸ್ ಅಧಿಕಾರಿ ನಿಂತಿರುವುದನ್ನು ನೋಡುವುದು ನಮ್ಮಲ್ಲಿ ಹೆಚ್ಚಿನವರಲ್ಲಿ ಭಯದ ಚಿತ್ರಣವನ್ನು ಮಾತ್ರ ಸೃಷ್ಟಿಸುತ್ತದೆ, ಅದರ ಕಾರಣದಿಂದಾಗಿ ವಿವಿಧ ಸ್ಥಳಗಳಲ್ಲಿ ಕೆಲವು ಮಟ್ಟದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲಾಗುವುದು. ಭಯವು ಹೆಚ್ಚು ಅಜ್ಞಾತ ಭಯವಾಗಿದೆ ಏಕೆಂದರೆ ನಮಗೆ ಕಾನೂನು ಪ್ರಪಂಚದ ಬಗ್ಗೆ ನಮಗೆ ತಿಳಿದಿಲ್ಲ ಮತ್ತು ಆದ್ದರಿಂದ ನಾವು ಯಾವುದಾದರೂ ಅಪರಾಧಕ್ಕೆ ಸಿಲುಕಿಕೊಂಡರೆ ಏನಾಗಬಹುದು ಎಂದು ಭಯಪಡುತ್ತೇವೆ.

ದುರದೃಷ್ಟವಶಾತ್, ನಮ್ಮ ಶಿಕ್ಷಣ ವ್ಯವಸ್ಥೆಯು ಈ ನಿಟ್ಟಿನಲ್ಲಿ ಯಾವುದೇ ಶಿಕ್ಷಣವನ್ನು ಒದಗಿಸುವುದಿಲ್ಲ ಹಾಗೂ ನಮ್ಮ ಮಕ್ಕಳು ಮತ್ತು ಯುವಕರು ಯಾವುದೇ ಮಾಹಿತಿಯಿಲ್ಲದೆ ಅವರದೇ ಆದ ಕದನಗಳಲ್ಲಿ ಹೋರಾಡಲು ಬಿಡುತ್ತಾರೆ. ಈ ಪಾಠವು ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಾಗಿದೆ. ಇದು ವ್ಯಕ್ತಿಯು ತಿಳಿದಿರಬೇಕಾದ ಕೆಲವು ಕಾನೂನು ಅಂಶಗಳ ಪಕ್ಷಿನೋಟವನ್ನು ಮಾತ್ರ ಒದಗಿಸುತ್ತದೆ ಮತ್ತು ಸಮುದಾಯದ ಇತರ ಸದಸ್ಯರಲ್ಲಿ ಜಾಗೃತಿ ಮೂಡಿಸಲು ಹಾಗೂ ಅದನ್ನು ಹರಡಿಸಿ ಸದಸ್ಯರನ್ನು ಉತ್ತೇಜಿಸಲು ಉದ್ದೇಶಿಸಲಾಗಿದೆ.

ಕೆಳಗೆ ನೀಡಲಾದ ಚಟುವಟಿಕೆಯು ಕೆಲವು ಕಾನೂನು ಕ್ಷೇತ್ರಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಮತ್ತು ಅವರ ಸಮುದಾಯದ ಸದಸ್ಯರಲ್ಲಿ ಜಾಗೃತಿ ಮೂಡಿಸಲು ಯುವಕರನ್ನು ಉತ್ತೇಜಿಸಲು ಉದ್ದೇಶಿಸಲಾಗಿದೆ.

# ಚಟುವಟಿಕೆ 1



## ಉದ್ದೇಶಗಳು

- ದೇಶದ ನಾಗರಿಕರ ಕೆಲವು ಪ್ರಮುಖ ಕಾನೂನುಗಳು ಮತ್ತು ಹಕ್ಕುಗಳ ಬಗ್ಗೆ ಅರಿವು ಮತ್ತು ತಿಳುವಳಿಕೆಯನ್ನು ನೀಡುವುದು ಮತ್ತು
- ಶಿಕ್ಷಣಾರ್ಥಿಯರ ಸಂವಹನ ಕೌಶಲ್ಯ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಅಭಿವೃದ್ಧಿಪಡಿಸುವುದು.

## METHOD ವಿಧಾನ

ಆಯೋಜಕರು, ಶಿಕ್ಷಣಾರ್ಥಿಯರನ್ನು 4–5 ಸದಸ್ಯರ ಗುಂಪುಗಳಾಗಿ ವಿಂಗಡಿಸಿರಿ. ಪ್ರತಿ ಗುಂಪಿಗೆ ಅನುಬಂಧದಲ್ಲಿ ಒದಗಿಸಲಾದ ಮಾಹಿತಿಯೊಂದಿಗೆ ಕೆಳಗೆ ನೀಡಲಾದ ವಿಷಯಗಳಿಂದ ಒಂದು ವಿಷಯವನ್ನು ನೀಡಿರಿ. ಅವರಿಗೆ ನೀಡಿದ ವಿಷಯದ ಬಗ್ಗೆ ಇತರ ಶಿಕ್ಷಣಾರ್ಥಿಯರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕವನ್ನು ರಚಿಸಲು ಗುಂಪಿನ ಸದಸ್ಯರನ್ನು ಕೇಳಿರಿ.

### ಒಳಗೊಳ್ಳುವ ವಿವಿಧ ವಿಷಯಗಳೆಂದರೆ:



- ಬಾಲಕಾರ್ಮಿಕ
- ಬಾಲ್ಯ ವಿವಾಹ
- ಗ್ರಾಹಕರ ಹಕ್ಕುಗಳು
- ಮಾಹಿತಿ ಹಕ್ಕು
- ಮಗುವಿನ ಜನನ ಮತ್ತು ಲಿಂಗ ಆಯ್ಕೆಗೆ ಸಂಬಂಧಿಸಿದ ಕಾನೂನುಗಳು
- ಕೌಟುಂಬಿಕ ದೌರ್ಜನ್ಯದ ವಿರುದ್ಧ ಮಹಿಳೆಯರ ರಕ್ಷಣೆ
- ಪರಿಸರವನ್ನು ರಕ್ಷಿಸುವುದು
- ಅಂಗವೈಕಲ್ಯ ಹೊಂದಿರುವ ಜನರ ಹಕ್ಕುಗಳು

ಪ್ರತಿ ಗುಂಪಿಗೆ ಅವರು ಒಳಗೊಳ್ಳುವ ವಿಷಯದ ಕಾನೂನುಗಳನ್ನು ಅರ್ಥಮಾಡಿಕೊಳ್ಳಲು 20 ನಿಮಿಷಗಳನ್ನು ಮತ್ತು ಬೀದಿ ನಾಟಕವನ್ನು ತಯಾರಿಸಲು 20 ನಿಮಿಷಗಳನ್ನು ನೀಡಿರಿ. ನಂತರ ಗುಂಪುಗಳು ಅವರ ಬೀದಿ ನಾಟಕಗಳನ್ನು ಪ್ರಸ್ತುತಪಡಿಸಲು ಕೇಳಿರಿ ಮತ್ತು ಶಿಕ್ಷಣಾರ್ಥಿಯರು ವಿಷಯದ ಬಗ್ಗೆ ಅವರು ಎಷ್ಟು ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಶ್ನೆ ಮತ್ತು ಉತ್ತರಗಳನ್ನು ನೀಡುವುದು.

ಆಯೋಜಕರು ಪ್ರತಿ ಬೀದಿ ನಾಟಕದ ನಂತರ ನಡೆಯುವ ಚರ್ಚೆಯನ್ನು ಸುಗಮಗೊಳಿಸಬೇಕು ಹಾಗೂ ಎಲ್ಲಾ ಶಿಕ್ಷಣಾರ್ಥಿಯರು ಮಾಹಿತಿಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಆಯೋಜಕರು ಕಪ್ಪು ಹಲಗೆಯ ಮೇಲೆ ಪ್ರತಿ ವಿಷಯಗಳ ಪ್ರಮುಖ ಅಂಶಗಳನ್ನು ಬರೆಯಿರಿ ಹಾಗೂ ಚರ್ಚೆಯನ್ನು ಸಂಕ್ಷಿಪ್ತಗೊಳಿಸಿರಿ.

### ಆಯೋಜಕರಿಗೆ ಗಮನಿಸಿ

ಕೆಳಗೆ ನೀಡಲಾದ ಕರಪತ್ರದ ಸಹಾಯದಿಂದ FIR (ಪ್ರಥಮ ಮಾಹಿತಿ ವರದಿ) ದಾಖಲಿಸಲು ಸಂಬಂಧಿಸಿದ ಕೆಲವು ಪ್ರಮುಖ ಸಾಮಾನ್ಯ ಜ್ಞಾನದ ಪ್ರಶ್ನೆಗಳನ್ನು ಆಯೋಜಕರು ಚರ್ಚಿಸಿರಿ. ಆಯೋಜಕರು ಮೊದಲು ಗುಂಪಿನೊಂದಿಗೆ ಕರಪತ್ರವನ್ನು ಚರ್ಚಿಸಿರಿ ನಂತರ ಚರ್ಚಿಸಿದ ಅಂಶಗಳನ್ನು ಮರುಪರಿಶೀಲಿಸಲು ಶಿಕ್ಷಣಾರ್ಥಿಯರಿಗೆ ಸಹಾಯ ಮಾಡಲು ಕೆಳಗೆ ನೀಡಲಾದ ಚಟುವಟಿಕೆಯನ್ನು ಮಾಡುವುದು.

## ಚಟುವಟಿಕೆ 2



### ಉದ್ದೇಶಗಳು

- ದೇಶದ ನಾಗರಿಕರ ಕೆಲವು ಪ್ರಮುಖ ಕಾನೂನುಗಳು ಮತ್ತು ಹಕ್ಕುಗಳ ಬಗ್ಗೆ ಅರಿವು ಮತ್ತು ತಿಳುವಳಿಕೆಯನ್ನು ನೀಡುವುದು,
- ಯುವಜನರು ಕಾನೂನು ಸಂದರ್ಭಗಳನ್ನು ನಿಭಾಯಿಸುವಲ್ಲಿ ಅವರು ಹೊಂದಿರಬಹುದಾದ ಭಯ ಮತ್ತು ಆತಂಕಗಳಿಂದ ಹೊರಬರುವಂತೆ ಸಹಾಯ ಮಾಡುವುದು, ಮತ್ತು
- ಶಿಕ್ಷಣಾರ್ಥಿಯರ ಸಂವಹನ ಮತ್ತು ವಿಮರ್ಶಾತ್ಮಕ ಚಿಂತನೆಯನ್ನು ಅಭಿವೃದ್ಧಿಪಡಿಸುವುದು.

### METHOD ವಿಧಾನ

ಆಯೋಜಕರು ಸಣ್ಣ ಆಟವನ್ನು ಆಡಿಸುವುದು, ಕೋಣೆಯ ಮಧ್ಯದಲ್ಲಿ ಇಬ್ಬರು ಸದಸ್ಯರು ಕೈಗಳನ್ನು ಎತ್ತಿ ಜೋಡಿಸಿ ಹಿಡಿದುಕೊಳ್ಳುವುದು. ಎಲ್ಲಾ ಶಿಕ್ಷಣಾರ್ಥಿಯರು ಜೋಡಿಸಿದ ಕೈಗಳ ಮಧ್ಯದಲ್ಲಿ ಹಾದುಹೋಗುವುದು. ಹಾಗೂ ಅವರೆಲ್ಲರೂ ಈ ಹಾಡನ್ನು ಹಾಡುವುದು :



ಪೋಷಂ ಪ ಗೊಸ್ ಪೋಷಂ ಪ
ವಾಟ್ ಡಿಡ್ ದಿ ವಾಚಮನ್ ಡು?
ಹಿ ಸ್ಟೋಲ್ ದಿ ವಾಚ್ ಆಂಡ್ ನೋ ಒನ್ ನ್ಯೂ
ವಾಟ್ ವಿಲ್ ಹಾಪೆನ್ ನೌ ಟೂ?
ಹಿ ವಿಲ್ ಹಾವ್ ಟೂ ಗೊ ಟೂ ಜೈಲ್
ಹಿಟ್ ಹಿಸ್ ಬ್ರೆಡ್ ಆಂಡ್ ಬಟರ್ ದೆರ್
ಹಿ ವಿಲ್ ಹಾವ್ ಟೂ ಗೊ ಟೂ ಜೈಲ್, ನೌ

**Posham pa goes posham pa**
**What did the watchman do?**
**He stole the watch and no o**
**What will happen now too?**
**He will have to go to jail,**
**Eat his bread and butter the**
**He will have to go to jail, no**

ಇಬ್ಬರು ಶಿಕ್ಷಣಾರ್ಥಿಯರು ಕೈ ಎತ್ತಿ ಹಿಡಿದು ಈ ಹಾಡನ್ನು ಹಾಡುತ್ತಿದ್ದಂತೆ, ಉಳಿದ ಸದಸ್ಯರು ಮಧ್ಯದಲ್ಲಿ ಹಾದುಹೋಗುತ್ತಿರಬೇಕು. ಹಾಡು ಮುಗಿದಾಗ, ಜೋಡಿಯು ಹಿಡಿದ ಕೈಕೆಳಗೆ ಮಧ್ಯದಲ್ಲಿ ನಿಂತಿರುವ ವ್ಯಕ್ತಿಯನ್ನು ಹಿಡಿಯಯುವುದು ಮತ್ತು ಕೈದಿ ಎಂದು ಪರಿಗಣಿಸುವುದು. ಅವರಿಗೆ ಕರಪತ್ರದಿಂದ ಪ್ರಶ್ನೆಯನ್ನು ಕೇಳಿರಿ ಮತ್ತು ಅವರು ಪ್ರಶ್ನೆಗೆ ಸರಿಯಾಗಿ ಉತ್ತರಿಸಿದರೆ ಮಾತ್ರ ಆಯೋಜಕರು ಬಿಡಬೇಕು.

### ಚರ್ಚಿಸಬೇಕಾದ ಅಂಶಗಳು:

#### ಆಯೋಜಕರು

- ಎಫ್‌ಐಆರ್‌ಗೆ ಸಂಬಂಧಿಸಿದ ಕಾರ್ಯವಿಧಾನಗಳು ಮತ್ತು ಎಫ್‌ಐಆರ್ ದಾಖಲಿಸುವ ಬಗ್ಗೆ ತಿಳಿದಿರುವ ಪ್ರಾಮುಖ್ಯತೆಯನ್ನು ಚರ್ಚಿಸಿರಿ.
- ಮಹಿಳಾ ಪೊಲೀಸ್ ಅರಕ್ಷಕರು ಇಲ್ಲದ ಠಾಣೆಯಲ್ಲಿ ಮಹಿಳೆ ಅಪರಾಧಿಯನ್ನು ಬಂಧನದಲ್ಲಿ ಇರಿಸಿಕೊಳ್ಳುವಂತಿಲ್ಲ ಎಂಬಂತಹ ಕೆಲವು ಪ್ರಮುಖ ಕಾನೂನುಗಳನ್ನು ಸಹ ಹಂಚಿಕೊಳ್ಳಿ. ಮಹಿಳಾ ಅರಕ್ಷಕರು ಇಲ್ಲದಿದ್ದರೆ ಮಹಿಳೆಯನ್ನು ಪೊಲೀಸರು ಬಂಧಿಸಿ ತರುವಂತಿಲ್ಲ.
- ಪೊಲೀಸ್ ಮತ್ತು ಕಾನೂನು ವ್ಯವಸ್ಥೆಯೊಂದಿಗೆ ವ್ಯವಹರಿಸುವಾಗ ಭಯ ಮತ್ತು ಆತಂಕಗಳನ್ನು ಕಡಿಮೆ ಮಾಡಲು ಈ ಅರಿವು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ಸಹ ಆಯೋಜಕರು ಚರ್ಚಿಸಿರಿ. ಹಾಗೂ ಇತರ ಯಾವುದೇ ವ್ಯಕ್ತಿಯಂತೆ ಹಕ್ಕುಗಳನ್ನು ಆನಂದಿಸುವುದು ಮತ್ತು ಪ್ರತಿ ಹಕ್ಕಿನೊಂದಿಗೆ ಜವಾಬ್ದಾರಿಯುತ ನಾಗರಿಕರಾಗಿ ಕಾರ್ಯನಿರ್ವಹಿಸಲು ಜವಾಬ್ದಾರಿ ಮತ್ತು ಹೊಣೆಗಾರಿಕೆ ಬರುವುದು ಎಂದು ಸದಸ್ಯರು ಅರಿತುಕೊಳ್ಳಬೇಕು ಎಂದು ತಿಳಿಸಿರಿ.

## ಶಿಕ್ಷಣಾರ್ಥಿಯರಿಗೆ ಕಾರ್ಯಗಳು

ಶಿಕ್ಷಣಾರ್ಥಿಯರು ಕಾನೂನು ವಿಷಯದಲ್ಲಿ ಅವರಿಗೆ ಇಷ್ಟವಾದ ವಿಷಯದ ಕರಪತ್ರಗಳನ್ನು ಮಾಡಲು ಮತ್ತು ಅದನ್ನು ಅವರ ಗೆಳೆಯರೊಂದಿಗೆ ಹಂಚಿಕೊಳ್ಳಲು ತಿಳಿಸಿ. ಸದಸ್ಯರು ಮರಳಿ ಬಂದು ಅವರ ಅನುಭವಗಳನ್ನು ಶಿಕ್ಷಣಾರ್ಥಿಯರ ಗುಂಪಿನೊಂದಿಗೆ ಹಂಚಿಕೊಳ್ಳಲಿ.

## ದೃಷ್ಟಾಂತ ಕಲಿಕೆ

ಚಂದ್ರಶೇಖರನಿಗೆ 19 ವರ್ಷ. ಅವನು ಇತ್ತೀಚೆಗೆ ಅವನ ಡಿಪ್ಲೋಮಾ ಎಂಜಿನಿಯರಿಂಗ್ ಪರೀಕ್ಷೆಯನ್ನು ಬರೆದಿದ್ದಾನೆ. ಅವನು ಫಲಿತಾಂಶಗಳಿಗಾಗಿ ಕಾಯುತ್ತಿರುವನು. ಅವನ ಸ್ನೇಹಿತರೊಂದಿಗೆ ಅವನ ಸಮಯವನ್ನು ಕಳೆಯುವನು. ಅವನು ಬಡ ಮಕ್ಕಳಿಗೆ ಮನೆಪಾಠದ ತರಗತಿಗಳನ್ನು ನೀಡಲು ಇಷ್ಟಪಡುವನು. ಅವನ ಶಾಂತತೆ, ಸ್ವಯಂ ನಿರ್ಣಯ ಮತ್ತು ಸಹಾಯ ಮಾಡುವ ಸ್ವಭಾವದ ಬಗ್ಗೆ ಹೆಮ್ಮೆಪಡುವನು. ಅವನಿಗೆ ಮೆಚ್ಚುಗೆ ಸಿಕ್ಕಾಗ ಅವನು ಚೆನ್ನಾಗಿರುವನು. ಅವನಿಗೆ ಸಬ್ ಇನ್ಸ್‌ಪೆಕ್ಟರ್ ಆಗುವ ಆಸೆ. ಪೊಲೀಸ್ ಇನ್ಸ್‌ಪೆಕ್ಟರ್ ಆಗುವ ತಯಾರಿಯ ಬಗ್ಗೆ ಮಾಹಿತಿ ಪಡೆಯುವಲ್ಲಿ ಅವನ ಚಿಕ್ಕಪ್ಪ ಅವನನ್ನು ಬೆಂಬಲಿಸುವರು.

ಅವನ ಆತ್ಮೀಯ ಗೆಳೆಯರಲ್ಲಿ ಒಬ್ಬನಾದ ರಾಜೇಶ್, ಅವನ ತಂದೆ ಆತನನ್ನು ಹಾಗೂ ಕುಟುಂಬದ ಇತರ ಸದಸ್ಯರನ್ನು ಬಹಳ ಸಮಯದಿಂದ ದೈಹಿಕವಾಗಿ ಕಿರುಕುಳ ನೀಡುತ್ತಿದ್ದರು. ರಾಜೇಶ್‌ಗೆ ಈ ಬಗ್ಗೆ ಬೇಸರವಾಗಿದ್ದರೂ ಏನು ಮಾಡಬೇಕೆಂದು ತೋಚುತ್ತಿಲ್ಲ. ಅವನ ಸ್ನೇಹಿತನ ತಾಯಿಯೂ ಬೇಸರಗೊಂಡಿದ್ದಾರೆ. ಅವರಿಗೆ 3 ಸಹೋದರಿಯರು ಹಾಗೂ 2 ಸಹೋದರರಿದ್ದಾರೆ. ರಾಜೇಶ್ ತನ್ನ ತಂದೆಯ ವಿರುದ್ಧ ನಿಲ್ಲಲು ಸಾಧ್ಯವಾಗದೆ, ಚಂದ್ರಶೇಖರ್‌ನ ಸಹಾಯ ಕೇಳಿದ್ದಾನೆ

## ಚರ್ಚಾ ಪ್ರಶ್ನೆಗಳು
(ದೃಷ್ಟಾಂತ ಕಲಿಕೆ ಓದಿದ ನಂತರ)



ಚಂದ್ರಶೇಖರ್ ಏನು ಮಾಡಬೇಕು?

ಚಂದ್ರಶೇಖರ್ ಅವನ ಸ್ನೇಹಿತನಿಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಬಹುದೇ? ಅವರು ಎಫ್.ಐ.ಆರ್. ದಾಖಲಿಸಬೇಕೇ? ಪೊಲೀಸರನ್ನು ಸಂಪರ್ಕಿಸುವ ಬಗ್ಗೆ ಅವನ ಸ್ನೇಹಿತನೊಂದಿಗೆ ಮಾತನಾಡಬೇಕೇ?

ನಿಮ್ಮ ಹಳ್ಳಿಯ ಜನರು ಕಾನೂನು ಪ್ರಕ್ರಿಯೆಗಳ ಬಗ್ಗೆ ತಿಳಿದುಕೊಳ್ಳಲು ನೀವು ಹೇಗೆ ಸಹಾಯ ಮಾಡುವಿರಿ?

ಪ್ರತಿಫಲಗಳು : (ಆಯೋಜಕರು ಈ ತರಗತಿ ಬಗ್ಗೆ ಬರೆಯಿರಿ.)

ನನ್ನ ಕಲಿಕೆಗಳು: (ಈ ತರಗತಿಯಿಂದ ಶಿಕ್ಷಣಾರ್ಥಿಗಳು ಏನು ಕಲಿತರು ಎಂಬುದರ ಕುರಿತು ಆಯೋಜಕರು ಬರೆಯಿರಿ).